ವಿಜಯಪುರ | ಸಂಪುಟ 01 | ಸಂಚಿಕೆ 308 | ಪುಟ 4 | ₹ 3.00

https://udayarashminews.com

udayarashmi 7026028778


# ಉದಯ ರಶ್ಮಿ

ಜನಪರ-ಜೀವಪರ

ಸಂಪಾದಕ : ಇಂದುಶೇಖರ ಮಣೂರ

ಕನ್ನಡ ದಿನಪತ್ರಿಕೆ

editor.udayarashmi@gmail.com RNI NO: KARKAN/2023/86203 ಶನಿವಾರ, ಫೆಬ್ರವರಿ 03, 2024



“ದಾವಣಗೆರೆಯಲ್ಲಿ ಇಂದು ಮತ್ತು ನಾಳೆ ನಡೆಯಲಿರುವ 38ನೇ ರಾಜ್ಯ ಪತ್ರಕರ್ತರ ಸಮ್ಮೇಳನ ಹಲವು ವಿಶೇಷತೆಗಳನ್ನೊಳಗೊಂಡಿದೆ. ಇದು ನಾಡಿನ ಮಧ್ಯಭಾಗದಲ್ಲಿ ನಡೆಯುತ್ತಿರುವುದರಿಂದ ಇದು ಎಲ್ಲರನ್ನೂ ಒಳಗೊಳ್ಳುವ ಸಮ್ಮೇಳನವಾಗಬೇಕು.”

– ಶಿವಾನಂದ ತಗಡೂರ
ರಾಜ್ಯಾಧ್ಯಕ್ಷರು, ಕಾರ್ಯನಿರತ ಪತ್ರಕರ್ತರ ಸಂಘ

## ಮುದ್ದೇಬಿಹಾಳದಲ್ಲಿ ಸಿಎಂ ಸಿದ್ಧರಾಮಯ್ಯರಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಡಿಗಲ್ಲು

# ಜನರನ್ನು ತಪ್ಪುದಾರಿಗೆಳೆಯುತ್ತಿರುವ ಬಿಜೆಪಿ :ಸಿಎಂ

**ಉದಯರಶ್ಮಿ ನ್ಯೂಸ್**

ಮುದ್ದೇಬಿಹಾಳ: ಇಲ್ಲಿಯವರೆಗೆ ಯಾವ ಸರ್ಕಾರವೂ ನೀಡದ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ನೀಡಿದೆ. ವಿಧಾನಸಭೆ ಚುನಾವಣೆ ಪ್ರಚಾರಕ್ಕೆ ಬಂದಾಗ ಆಶ್ವಾಸನೆ ನೀಡಿದಂತೆ 5 ಯೋಜನೆಗಳನ್ನು ಜಾರಿಗೆ ತರುವ ಮೂಲಕ ನುಡಿದಂತೆ ನಡೆದಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

ಶುಕ್ರವಾರ ಪಟ್ಟಣದ ವಿಬಿಸಿ ಹೈಸ್ಕೂಲ್ ಮೈದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಅಡಿಗಲ್ಲು ಹಾಗೂ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

ಬಿಜೆಪಿಯವರು ನಮ್ಮ ಯೋಜನೆಗಳನ್ನು ಅನಿಷ್ಠಾನಗೊಳಿಸಲು ಸರ್ಕಾರದಲ್ಲಿ ಹಣ ಇಲ್ಲ ಅಂತಾರೆ, ಚುನಾವಣೆ ಪ್ರಚಾರದಲ್ಲಿ ಈ 5 ಯೋಜನೆಗಳು ಜಾರಿಗೊಂಡರೆ ಸರ್ಕಾರ ದಿವಾಳಿ ಆಗುತ್ತೆ ಅಂದಿದ್ರು, ಜೂನ್ ನಿಂದಲೇ ಯೋಜನೆಗಳು ಜಾರಿಯಾಗಿವೆ. ದಿವಾಳಿ ಆಗಿದೆಯಾ ಎಂದು ಪ್ರಶ್ನಿಸಿದರು. ಜನತೆಯನ್ನು ತಪ್ಪುದಾರಿಗೆಳೆಯಲು 5 ಗ್ಯಾರಂಟಿಗಳನ್ನು ಕೊಟ್ಟಿರುವ ಸಿದ್ಧರಾಮಯ್ಯನವರ ಸರ್ಕಾರದಲ್ಲಿ ಯಾವುದೇ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಹಣ ಇಲ್ಲ ಅಂತಾ ಸುಳ್ಳು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಸರ್ಕಾರದಲ್ಲಿ ದುಡ್ಡು ಇರದೇ ಇದ್ದರೆ ಈ ಅಭಿವೃದ್ಧಿ ಕಾಮಗಾರಿಗಳಿಗೆ ದುಡ್ಡು ಎಲ್ಲಿಂದ ಬರ್ತಿತ್ತು? ಸಮಾಜಕಲ್ಯಾಣ, ಲೋಕೋಪಯೋಗಿ, ಕೌಶಾಲ್ಯಾಭಿವೃದ್ಧಿ, ಕರ್ನಾಟಕ ನಗರ ನೀರು ಸಬರಾಜು ಮಂಡಳಿ, ಕೃಷಿ ಮಾರಾಟ, ಉನ್ನತ ಶಿಕ್ಷಣ ಇಲಾಖೆ ಹೀಗೆ ಅನೇಕ ಇಲಾಖೆಗಳ ಅಭಿವೃದ್ಧಿ ಕೆಲಸಗಳಿಗೆ ಇಂದು ಚಾಲನೆ ನೀಡಿದ್ದೇವೆ ಎಂದರು.

ನುಡಿದಂತೆ ನಡೆದವರು ಬಸವಾದಿ ಶರಣರು, ಇಂದು ಅವರ ಹಾದಿಯಲ್ಲೇ ನಾವೂ ಸಾಗುತ್ತಿದ್ದೇವೆ. ಬಡವ, ಬಲ್ಲಿದ, ಶ್ರೀಮಂತ, ಮೇಲು, ಕೀಳು, ಕಾಂಗ್ರೆಸ್, ಬಿಜೆಪಿ ಎನ್ನದೇ ಎಲ್ಲ–ರಿಗೂ ಸದುಪಯೋಗವಾಗುವಂತೆ ಯೋಜನೆಗಳನ್ನು ರೂಪಿಸಿದ್ದೇವೆ. ನಮ್ಮಲ್ಲಿ ಜಾತಿಯ ವ್ಯವಸ್ಥೆ ಬೇರೂರಿದೆ. ಅದನ್ನು ಮೊದಲು ಹೋಗಲಾಡಿಸಬೇಕು. ಬಸವಾದಿ ಶರಣರು ಹಾಕಿದ ಮಾರ್ಗದಲ್ಲಿ ನಡೆಯಬೇಕು. ಅವರು ಹಾಕಿದ ಮಾರ್ಗವನ್ನು ಪಾಲನೆ ಮಾಡದೇ ಹೋದರೆ ಈ ಸಮಾಜ ಎಂದಿಗೂ ಸುಧಾರಣೆಯಾಗಲು ಸಾಧ್ಯವಿಲ್ಲ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ ಮಾತನಾಡಿ, ಹಿಂದಿನ ಬಿಜೆಪಿ ಸರ್ಕಾರ ಸುಮಾರು 2ಲಕ್ಷ ಕೋಟಿ ರೂಪಾಯಿಗಿಂತ ಜಾಸ್ತಿ ಬಿಲ್‌ಗಳನ್ನು ಬಾಕಿ ಇಟ್ಟು ನಮ್ಮ ಸರ್ಕಾರದ ಮೇಲೆ ಹೊರೆ ಹಾಕಿ ಹೋಗಿದೆ. ಇಂತಹ ಪರಿಸ್ಥಿತಿಯಲ್ಲಿಯೂ ಬಡವರಿಗೆ, ಮಹಿಳೆಯರಿಗೆ, ನಿರುದ್ಯೋಗಿ ಯುವಕರಿಗಾಗಿ ಐದೂ ಗ್ಯಾರಂಟಿಗಳನ್ನು ಜಾರಿಗೊಳಿಸಿದ ಸಿದ್ಧರಾಮಯ್ಯನವರು ಸಾಮಾಜಿಕ ಭದ್ರತೆ ನೀಡಿದ್ದಾರೆ ಎಂದರು.

ಜವಳಿ, ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ಮಾತನಾಡಿ, ಬರಗಾಲದ ಬವಣೆಯಲ್ಲಿ ರಾಜ್ಯದ ಪ್ರತಿಯೊಬ್ಬರು ನೆನೆಯುವದು ಸಿದ್ದರಾಮಯ್ಯನವರನ್ನು. ಹಸಿದ ಹೊಟ್ಟೆಯನ್ನು ತುಂಬಿಸಿದ, ಈ ಹಿಂದೆ 9ಸಾವಿರ ಕೋಟಿ ಸಾಲ ಮನ್ನಾ ಮಾಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಮಾತ್ರ ಎಂದರು.

ಶಾಸಕ, ಸಾಬೂನು ಮತ್ತು ಮಾರ್ಜಕ ನಿಗಮದ ಅಧ್ಯಕ್ಷ ಸಿ.ಎಸ್.ನಾಡಗೌಡ ಅಪ್ಪಾಜಿ ಮಾತನಾಡಿದರು.

ಈ ವೇಳೆ ಮುಖ್ಯಮಂತ್ರಿಗಳಿಗೆ, ವಿವಿಧ ಮಠಾಧೀಶರು, ನಿವೃತ್ತ ಸೈನಿಕರು, ಹಿರಿಯ ನಾಗರೀಕರಿಂದ ಸನ್ಮಾನಿಸಿ ಗೌರವಿಸಲಾಯಿತು. ನಾಗಠಾಣ ಶಾಸಕ ವಿಠ್ಠಲ ಕಟಗದೊಂಡ, ಸಿಂದಗಿ ಶಾಸಕ ಅಶೋಕ ಮನಗೂಳಿ, ವಿಧಾನ ಪರಿಷತ್ ಶಾಸಕ ಪ್ರಕಾಶ ರಾಠೋಡ, ಜಿಲ್ಲಾಧಿಕಾರಿ ಟಿ.ಬೂಬಾಲನ, ಜಿಲ್ಲಾ ಪಂಚಾಯತ ಸಿಇಓ ರಿಷಿ ಆನಂದ, ತಹಶೀಲ್ದಾರ ಬಲರಾಮ ಕಟ್ಟಿಮನಿ, ಪ್ರಭಾರ ತಾಲೂಕು ಪಂಚಾಯತ ಇಓ ಯುವರಾಜ ಹನಗಂಡಿ ಸೇರಿದಂತೆ ಮತ್ತಿತರರು ಇದ್ದರು.





ಕಾರ್ಯಕ್ರಮದ ಬಳಿಕ ಸಿ.ಎಂ.ಸಿದ್ಧರಾಮಯ್ಯನವರು ಹಾಲುಮತ ಸಮಾಜದ ಗುರು ಪೀಠವಾದ ತಾಲೂಕಿನ ಸರೂರ ಗ್ರಾಮದ ಶ್ರೀ ರೇವಣಸಿದ್ಧೇಶ್ವರರ ದರ್ಶನ ಪಡೆದರು. ನಂತರ ತಾಲೂಕಿನ ಕವಡಿಮಟ್ಟಿಯಲ್ಲಿನ ಸಂಗೊಳ್ಳಿ ರಾಯಣ್ಣನ ಕಂಚಿನ ಮೂರ್ತಿಯನ್ನು ಅನಾವರಣಗೊಳಿಸಿ ಸೇರಿದ್ದ ಜನತೆಯನ್ನುದ್ದೇಶಿಸಿ ಮಾತನಾಡಿ, ರಾಯಣ್ಣನ ಆದರ್ಶ ತತ್ವಗಳನ್ನು ಪ್ರತಿಯೊಬ್ಬರೂ ಪಾಲಿಸೋಣ ಎಂದರು.



ವಿಜಯಪುರ ಜಿಲ್ಲೆಯ 8 ವಿಧಾನಸಭಾ ಕ್ಷೇತ್ರಗಳ ಪೈಕಿ 6 ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಜಯಭೇರಿ ಬಾರಿಸಲು ಬಹುದೊಡ್ಡ ಆಶೀರ್ವಾದ ಮಾಡಿದ್ದೀರಿ. ಉಳಿದ 2 ಕ್ಷೇತ್ರಗಳಲ್ಲೂ ಕೂಡ ಆಶೀರ್ವಾದ ಮಾಡಿದ್ರಿ. ಆದರೆ ನಮ್ಮ ತಪ್ಪಿನಿಂದಾಗಿ ನಾವು ಸೋತಿದ್ದೇವೆ. ನಿಮ್ಮ ಋಣ ತೀರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಪಕ್ಷದ ಎಲ್ಲರೂ ಮಾಡುತ್ತೇವೆ.


**– ಶಿವಾನಂದ ಪಾಟೀಲ, ಜವಳಿ, ಮಾರುಕಟ್ಟೆ ಸಚಿವರು**

ಕಾರ್ಯಕ್ರಮದಲ್ಲಿ ಮುದ್ದೇಬಿಹಾಳ ಶಾಸಕ ಸಿ.ಎಸ್.ನಾಡಗೌರನ್ನು ಮುಂದಿನ ಅವಧಿಯಲ್ಲಾದರೂ ಮಂತ್ರಿ ಮಾಡಿ ಎನ್ನುವ ಸಾರ್ವಜನಿಕರ ಮಾತಿಗೆ ಮುಖ್ಯಮಂತ್ರಿಗಳು, ಮಂತ್ರಿಗಳನ್ನಾಗಿ ಆಯ್ಕೆ ಮಾಡಲು ಕೇವಲ 15 ಶಾಸಕರಿಗೆ ಮಾತ್ರ ಅವಕಾಶ ಇದೆ. ಹಿರಿಯ, ಸಂಭಾವಿತ ರಾಜಕಾರಣಿಗಳಾದ ಸಿ.ಎಸ್.ನಾಡಗೌಡರಿಗೆ ಡಿಟರ್ಜಂಟ್ ನಿಗಮದ ಅಧ್ಯಕ್ಷರ ಜವಾಬ್ದಾರಿ ನೀಡಿದ್ದೇವೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದರು.

## ರಾಜ ನುಡಿ

ಸಾವಿರಾರು ವರ್ಷಗಳಿಂದ ಸಿಹಿ ನೀರಿನ ನದಿಗಳು, ಉಪ್ಪು ಸಮುದ್ರವನ್ನು ಸಿಹಿಯಾಗಿ ಪರಿವರ್ತಿಸಲು ಸಮುದ್ರವನ್ನು ಸೇರುತ್ತಲೇ ಇವೆ. ಆದರೂ ಸಮುದ್ರಗಳು ಸಿಹಿಯಾಗಲೇ ಇಲ್ಲಾ. ಕೆಲವರು ಈ ಸಮುದ್ರಗಳಂತೆ. ಎಷ್ಟೇ ಸಿಹಿಎರೆದರೂ ಬದಲಾಗಲಾರರು.

–ಡಾ. ರಾಜಶೇಖರ ನಾಗೂರ



## ವಚನ ಚಿಂತನ 292

**ಪದಾರ್ಥಗಳಲ್ಲಿ ಪರಮಾತ್ಮನಿಲ್ಲ**

*ಬಯಲು ಲಿಂಗವೆಂಬೆನೆ ? ಬಗಿದು ನಡೆವಲ್ಲಿ ಹೋಯಿತ್ತು.*
*ಬೆಟ್ಟ ಲಿಂಗವೆಂಬೆನೆ ? ಮೆಟ್ಟಿ ನಿಂದಲ್ಲಿ ಹೋಯಿತ್ತು.*
*ತರುಮರಾದಿಗಳು ಲಿಂಗವೆಂಬೆನೆ? ತರಿದಲ್ಲಿ ಹೋಯಿತ್ತು.*
*ಲಿಂಗ ಜಂಗಮದ ಪಾದವೇ ಗತಿಯೆಂದು ನಂಬಿದ*
*ಚೆನ್ನಮಲ್ಲಿಕಾರ್ಜುನಾ, ಸಂಗನಬಸವಣ್ಣನ ಮಾತು ಕೇಳದೆ ಕೆಟ್ಟೆನಯ್ಯಾ.*
*– ಅಕ್ಕಮಹಾದೇವಿಯವರು*


ಲಿಂಗದ ನಿಜ ನಿವಾಸದ ಬಗ್ಗೆ ಈ ವಚನದಲ್ಲಿ ಅಕ್ಕಮಹಾದೇವಿಯವರು ಚಿಂತನಗೈದಿದ್ದಾರೆ. ಅಂಗದಾಚೆಗಿನ ಪದಾರ್ಥಗಳಲ್ಲಿ ಲಿಂಗಸ್ವರೂಪವನ್ನು ಅರಸುತ್ತ, ಪ್ರಾರಂಭದಲ್ಲಿ ಬಯಲನ್ನು ಲಿಂಗವೆಂದು ಭಾವಿಸುತ್ತ ನಂತರ ಅದನ್ನು ಭಗೆದು ನೋಡಿದರೆ ಅಲ್ಲಿ ಖಾಲಿಯಾದ ಸ್ಥಿತಿದೊರೆಯುವ ಕಾರಣ ಅದು ಲಿಂಗವಲ್ಲವೆಂದು ನಿರ್ಧರಿಸುತ್ತಾರೆ, ನಂತರ ಬಯಲಿನಲ್ಲಿಯ ಬೆಟ್ಟವನ್ನೇ ಲಿಂಗವೆಂದು ನೋಡಲಾಗಿ ಅದನ್ನು ಮೆಟ್ಟಿನಿಂತಾಗ ಅದು ಲಿಂಗವಲ್ಲವೆಂಬ ಭಾವಮೂಡುತ್ತದೆ. ಬೆಟ್ಟದೊಳಗಿನ ಮರ ಸಸ್ಯಸಂಪತ್ತನ್ನೇ ಲಿಂಗವೆಂದು ಭಾವಿಸಲಾಗಿ ಅದುಸಹ ಒಂದು ದಿನ ನಾಶಹೊಂದುವುದಾಗಿ ಅರಿತಾಗ ಅವಿನಾಶಿಯಾದ ಅಂತರಂಗದ ಅರಿವು(ಲಿಂಗ) ಮತ್ತು ಜ್ಞಾನ(ಜಂಗಮ)ವೇ ಗತಿ ಎಂದು ಚೆನ್ನಮಲ್ಲಿಕಾರ್ಜುನನ ನಂಬಿರುವುದಾಗಿ ತಿಳಿಸಿದ್ದಾರೆ.ಇದನ್ನು ಮೊದಲೇ ನೀರಕಂಡಲ್ಲಿ ಮುಳುಗುವರಯ್ಯ, ಮರವಕಂಡಲ್ಲಿ ಸುತ್ತುವರಯ್ಯ ಎಂದು ಬಸವಣ್ಣನವರು ಪದಾರ್ಥಗಳು ದೇವರಲ್ಲ ಎಂಬುದನ್ನು ತಿಳಿಸಿದ್ದರೂ ಸಂಗನಬಸವಣ್ಣನ ಮಾತು ಕೇಳದೆ ಕೆಟ್ಟೆನಯ್ಯಾ. ಎಂದಿದ್ದಾರೆ.

-ರುದ್ರೇಶ ಕಿತ್ತೂರ, ಮುದ್ದೇಬಿಹಾಳ

# ನನ್ನ ಆರೋಗ್ಯ ಕುರಿತ ಅಪಪ್ರಚಾರ ಅಸಹ್ಯಕರ :ಜಿಗಜಿಣಗಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಸಹಜವಾದ ಆರೋಗ್ಯ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗಿದ್ದೆ. ಆದರೆ ಕೆಲವೊಂದು ವಿಕ್ಷಿಪ್ತ ಮನಸ್ಸುಗಳು ತಮ್ಮ ಸ್ವಾರ್ಥ ರಾಜಕಾರಣದ ಬೇಳೆ ಬೇಯಿಸಿಕೊಳ್ಳಲು ಸಾಮಾಜಿಕ ಜಾಲತಾಣದ ಮೂಲಕ ಅಪಪ್ರಚಾರ ಮಾಡಲು ಹೊರಟಿರುವುದು ನನ್ನ ಮನಸ್ಸಿಗೆ ನೋವಾಗಿದೆ. ನನ್ನ ಆರೋಗ್ಯದ ವಿಷಯವನ್ನು ಸಹ ರಾಜಕಾರಣಕ್ಕೆ ಬೆಸೆಯುವುದು ಎಷ್ಟು ಸರಿ? ಈ ಸಂದರ್ಭದಲ್ಲಿ ಸೌಜನ್ಯ ತೋರುವ ಬದಲು ಈ ರೀತಿಯಾಗಿ ಕೆಟ್ಟ ರೀತಿಯಲ್ಲಿ ವರ್ತಿಸುತ್ತಿರುವುದು ಸರಿಯಲ್ಲ, ನಾನು ಆರೋಗ್ಯವಾಗಿದ್ದೇನೆ, ಗುಣಮುಖನಾಗಿದ್ದೇನೆ ಎಂದು ಸಂಸದ ರಮೇಶ ಜಿಗಜಿಣಗಿ ಹೇಳಿದ್ದಾರೆ.



ಶುಕ್ರವಾರ ಈ ಕುರಿತು ಪತ್ರಿಕಾ ಹೇಳಿಕೆ ನೀಡಿದ ಅವರು, ನಾನು ನವದೆಹಲಿಗೆ ಪ್ರಯಾಣಿಸುವಾಗ ಅನಾರೋಗ್ಯದ ಹಿನ್ನೆಲೆಯಲ್ಲಿ ಮಾರ್ಗಮಧ್ಯೆ ಬಾಗಲಕೋಟೆಯ ಖಾಸಗಿ ಆಸ್ಪತ್ರೆಗೆ ದಾಖಲಾಗಿ ಈಗ ಆಸ್ಪತ್ರೆಯಿಂದ ಗುಣಮುಖರಾಗಿ ವಾಪಾಸ್ಸಾಗುತ್ತಿರುವೆ. ನನ್ನ ಆರೋಗ್ಯ ವಿಷಯವನ್ನು ರಾಜ–ಕಾರಣಕ್ಕೆ ಬೆರೆಸುವುದು ಸರಿಯಲ್ಲ, ಸಾಮಾನ್ಯವಾಗಿ ಕಾಣುವ ಸಮಸ್ಯೆ ನನಗೂ ಕಾಣಿಸಿದೆ, ಈ ಬಾರಿ ವಿಶ್ರಾಂತಿ ತೆಗೆದುಕೊಳ್ಳದ ಪರಿಣಾಮ ಸ್ವಲ್ಪ ಆರೋಗ್ಯದಲ್ಲಿ ಹೆಚ್ಚಿನ ವ್ಯತ್ಯಾಸ ಕಂಡು ಬಂದಿತ್ತು. ಈಗ ಸಂಪೂರ್ಣವಾಗಿ ಗುಣಮುಖನಾಗಿದ್ದೇನೆ, ಯಾವ ಆರೋಗ್ಯ ಸಮಸ್ಯೆಯೂ ಇಲ್ಲ ಎಂದು ಜಿಗಜಿಣಗಿ ಸ್ಪಷ್ಟಪಡಿಸಿದ್ದಾರೆ.

“ನನ್ನ ಆರೋಗ್ಯ ವಿಷಯವಾಗಿ ರಾಜಕಾರಣ ಮಾಡುತ್ತಿರುವುದು ನೋವು ತಂದಿದೆ. ಇಂತಹ ಸಂದರ್ಭದಲ್ಲಿ ಸೌಜನ್ಯ ತೋರುವ ಬದಲು ಕೆಲ ಮನಸ್ಸುಗಳು ರಾಜಕೀಯ ಮಾಡುತ್ತಿವೆ. ಅವರು ಸಾಮಾಜಿಕ ಜಾಲತಾಣಗಳ ಮೂಲಕ ಅಪಪ್ರಚಾರ ಮಾಡುತ್ತಿರುವುದು ಅಸಹ್ಯಕರವಾಗಿದೆ.”

**– ರಮೇಶ ಜಿಗಜಿಣಗಿ, ಸಂಸದರು, ವಿಜಯಪುರ**

## ಬೆಣ್ಣೆದೋಸೆ ನಗರಿ ದಾವಣಗೆರೆಯಲ್ಲಿ ಇಂದಿನಿಂದ ಪತ್ರಕರ್ತರ ಕಲರವ

# ದಾವಣಗೆರೆಯಲ್ಲಿ ಪತ್ರಕರ್ತರ 38ನೇ ರಾಜ್ಯ ಸಮ್ಮೇಳನ ಇಂದು

**ಉದಯರಶ್ಮಿ ನ್ಯೂಸ್**

ದಾವಣಗೆರೆ: ಜಿಲ್ಲೆಯಾಗಿ ಮೊದಲ ಬಾರಿಗೆ ರಾಜ್ಯ ಮಟ್ಟದ 38ನೇ ಪತ್ರಕರ್ತರ ರಾಜ್ಯ ಸಮ್ಮೇಳನ ನಡೆಯಲಿರುವ ಹಿನ್ನೆಲೆಯಲ್ಲಿ ನಗರದ ಅಂಬೇಡ್ಕರ್ ವೃತ್ತದಿಂದ ಮೆರವಣಿಗೆ ಫೆ.3ರಂದು ಬೆಳಗ್ಗೆ 8.30ಕ್ಕೆ ನಡೆಯಲಿದೆ.

ಮೆರವಣಿಗೆ ಪೂರ್ವದಲ್ಲಿ ಹರ್ಡೇಕರ್ ಮಂಜಪ್ಪ, ಮಹಾತ್ಮ ಗಾಂಧೀಜಿ, ಡಾ. ಬಿ.ಆರ್. ಅಂಬೇಡ್ಕರ್, ಬಾಬು ಜಗಜೀವನರಾಂ ಪ್ರತಿಮೆಗಳಿಗೆ ಮಾಲಾರ್ಪಣೆ ಮಾಡಿದ ನಂತರ ಅಂಬೇಡ್ಕರ್ ವೃತ್ತದಿಂದ ಮಾಧ್ಯಮದ ಮಿತ್ರರ ಬೃಹತ್ ಮೆರವಣಿಗೆ ನಡೆಯಲಿದ್ದು, ಮಹಾನಗರ ಪಾಲಿಕೆ ಮೇಯರ್ ವಿನಾಯಕ ಪೈಲ್ವಾನ್, ಆಯುಕ್ತರಾದ ರೇಣುಕಾ ಚಾಲನೆ ನೀಡಲಿದ್ದಾರೆ.

ಸಾರೋಟನಲ್ಲಿ ಇರಿಸಲಾಗುವ ವೃಕ್ಷದ ಆಕೃತಿಯಲ್ಲಿ ಬರುವ ರಂಬೆ–ಕೊಂಬೆಗಳಲ್ಲಿ ಎಲ್ಲಾ ಪತ್ರಿಕೆಗಳ ಶಿರೋನಾಮೆಗಳನ್ನು ಬಿಂಬಿಸಲಾಗುವುದು. ಮೆರವಣಿಗೆಯಲ್ಲಿ ಕಲಾ ತಂಡಗಳು, ಆನೆ ಗಮನ ಸೆಳೆಯಲಿವೆ. ಪತ್ರಕರ್ತರು, ಸಾಹಿತಿಗಳು, ಕನ್ನಡಪರ ಹೋರಾಟಗಾರರು ಮೆರವಣಿಗೆಯಲ್ಲಿ ಭಾಗವಹಿಸಲಿದ್ದಾರೆ.

ಉದ್ಘಾಟನೆ: ಮೆರವಣಿಗೆ ನಂತರ ಬೆಳಿಗ್ಗೆ 10.30 ಗಂಟೆಗೆ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರು ಸಮ್ಮೇಳನವನ್ನು ಉದ್ಘಾಟಿಸಲಿದ್ದಾರೆ. ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಘನ ಉಪಸ್ಥಿತಿ ಮತ್ತು ಕೆಯುಡಬ್ಲ್ಯುಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರ ಅಧ್ಯಕ್ಷತೆಯಲ್ಲಿ ಛಾಯಾಚಿತ್ರ ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಉದ್ಘಾಟಿಸಲಿದ್ದಾರೆ. ಸ್ಮರಣ ಸಂಚಿಕೆಯನ್ನು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಬಿಡುಗಡೆ ಮಾಡುವರು. ಸಮಾಜ ಕಲ್ಯಾಣ ಸಚಿವ ಡಾ. ಹೆಚ್.ಸಿ. ಮಹಾದೇವಪ್ಪ ಅವರು ವಸ್ತು ಪ್ರದರ್ಶವನ್ನು, ಕೈಗಾ–ರಿಕ ಸಚಿವ ಎಂ.ಬಿ. ಪಾಟೀಲ್ ಅವರು ವ್ಯಂಗ್ಯಚಿತ್ರ ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಲಿದ್ದಾರೆ. ಜಿಲ್ಲೆಯ ಎಲ್ಲಾ ಶಾಸಕರೂ, ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳು, ಜಿಲ್ಲೆಯ ಹಿರಿಯ ಅಧಿಕಾರಿಗಳು ಮುಖ್ಯ ಅತಿಥಿಗಳಾಗಿದ್ದಾರೆ.





ಗೋಷ್ಠಿ: ಸಮಾರಂಭದ ಉದ್ಘಾಟನೆಯ ನಂತರ ಮಧ್ಯಾಹ್ನ 2 ಗಂಟೆಗೆ ‘ಕೃತಕ ಬುದ್ಧಿಮತ್ತೆ ಮತ್ತು ಮಾಧ್ಯಮಗಳ ಭವಿಷ್ಯ’ ಮತ್ತು ಸಂಜೆ 4 ಗಂಟೆಗೆ ‘ಪತ್ರಿಕೆಗಳು : ಹಿಂದೆ–ಇಂದು–ಮುಂದು’ವಿಷಯಗಳ ಕು–ರಿತಂತೆ ಗೋಷ್ಠಿಗಳು ಜರುಗಲಿವೆ. ಕೊಪ್ಪಳ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಕೆ. ರವಿ, ಹಿರಿಯ ಪತ್ರಕರ್ತ ಈಶ್ವರ ದೈತೋಟ ಸೇರಿದಂತೆ ನಾಡಿನ ಹಿರಿಯ ಪತ್ರಕರ್ತರು ಗೋಷ್ಠಿಗಳನ್ನು ನಡೆಸಿಕೊಡಲಿದ್ದಾರೆ. ಅದೇ ದಿನ ಸಂಜೆ 6 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ.

ದಿನಾಂಕ 4ರ ಭಾನುವಾರ ಬೆಳಿಗ್ಗೆ 9.45ಕ್ಕೆ ಪ್ರತಿನಿಧಿಗಳ ಸಮಾವೇಶ ಜರುಗಲಿದೆ. ನಂತರ ಬೆಳಿಗ್ಗೆ 10.30ಕ್ಕೆ ‘ಮಾಧ್ಯಮ ಮತ್ತು ಸರ್ಕಾರ’ ಹಾಗೂ ಬೆಳಿಗ್ಗೆ 11.30ಕ್ಕೆ ‘ಸಾಮಾಜಿಕ ಮಾಧ್ಯಮ – ವೃತ್ತಿ ವಿಶ್ವಾಸಾರ್ಹತೆ’ವಿಷಯಗಳ ಕುರಿತ ಗೋಷ್ಠಿಗಳನ್ನು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್, ನಾಡಿನ ಹಿರಿಯ ಪತ್ರಕರ್ತ ಎಸ್.ಕೆ. ಶೇಷಚಂದ್ರಿಕಾ ಉದ್ಘಾಟಿಸಲಿದ್ದಾರೆ. ನಾಡಿನ ಹಿರಿಯ ಪತ್ರಕರ್ತರು ಗೋಷ್ಠಿಗಳನ್ನು ನಡೆಸಿಕೊಡುವರು.

ಸಮಾರೋಪ: ಗೋಷ್ಠಿಗಳ ನಂತರ ಮಧ್ಯಾಹ್ನ 2 ಗಂಟೆಗೆ ಜರುಗಲಿರುವ ಸಮಾರೋಪ ಸಮಾರಂಭದಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಸಮಾರೋಪದ ನುಡಿಗಳನ್ನಾಡುವರು. ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ, ಕಾರ್ಮಿಕ ಸಚಿವ ಸಂತೋಷ್ ಲಾಡ್, ಮಹಿಳಾ–ಮಕ್ಕಳ ಕಲ್ಯಾಣ ಸಚಿವೆ ಶ್ರೀಮತಿ ಲಕ್ಷ್ಮೀ ಹೆಬ್ಬಾಳ್ಕರ್, ಅರಣ್ಯ – ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಜಿಲ್ಲೆಯ ಶಾಸಕರು ವಿಶೇಷ ಆಹ್ವಾನಿತರಾಗಿದ್ದಾರೆ.

ಗೌರವಾರ್ಪಣೆ: ಪತ್ರಿಕೋದ್ಯಮದಲ್ಲಿ ಸೇವೆ ಸಲ್ಲಿಸಿರುವ–ಸಲ್ಲಿಸುತ್ತಿರುವ ದಾವಣಗೆರೆ ಜಿಲ್ಲೆಯ 60 ವರ್ಷ ಮೇಲ್ಪಟ್ಟ ಎಲ್ಲಾ ಹಿರಿಯ ಪತ್ರಕರ್ತರನ್ನು ಸನ್ಮಾನಿಸಿ, ಗೌರವಿಸಲಾಗುತ್ತದೆ. ಅಲ್ಲದೇ, ರಾಜ್ಯ ಪತ್ರಕರ್ತರ ಸಮ್ಮೇಳನದ ಸಂದರ್ಭದಲ್ಲಿ ಪ್ರತಿ ವರ್ಷ ನಾಡಿನ ಹಿರಿಯ ಪತ್ರಕರ್ತರಿಗೆ ಕೊಡಮಾಡುವ ಕೆಯುಡಬ್ಲ್ಯೂಜೆ ರಾಜ್ಯ ಪ್ರಶಸ್ತಿಯನ್ನು ದಾವಣಗೆರೆ ಜಿಲ್ಲೆಯ 6 ಜನರಿಗೆ ಸನ್ಮಾನ ಮಾಡಲಾಗುವುದು ಎಂದು ಕಾನಿಪ ಜಿಲ್ಲಾಧ್ಯಕ್ಷ ಇ.ಎಂ. ಮಂಜುನಾಥ್ ಏಕಬೋಟೆ, ಪ್ರಧಾನ ಕಾರ್ಯದರ್ಶಿ ಎ.ಫಕೃದ್ದೀನ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



### ಶಹಾಪುರದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಸಮಾರೋಪ

# ರಸ್ತೆ ಸುರಕ್ಷತೆಯಲ್ಲಿ ಚಾಲಕನ ಕರ್ತವ್ಯ ಮುಖ್ಯ :ಕಲ್ಲೇರಿ



**ಉದಯರಶ್ಮಿ ನ್ಯೂಸ್**

ಶಹಾಪುರ: ನಗರದಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಸಮಾರೋಪದ ಅಂಗವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ವಾಹನ ಚಾಲನಾ ಕೌಶಲ್ಯ ತರಬೇತಿ ಶಿಬಿರ ಕಾರ್ಯಕ್ರಮ ನಡೆಸಲಾಯಿತು.

ಸುರಕ್ಷತಾ ಮಾಸಚರಣೆಯಲ್ಲಿ ಕಲಬುರ್ಗಿ ಜಂಟಿ ಸಾರಿಗೆ ಆಯುಕ್ತರು ಸಿದ್ದಪ್ಪ ಕಲ್ಲೇರಿ ಹಾಗೂ ಬಸವರಾಜ್ ಕಡ್ಲಿ ಇವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ತದನಂತರ ಸಂಚಾರಿ ನಿಯಮ ಕಿರು ಪುಸ್ತಕವನ್ನು ರಾಜ್ಯಾಧ್ಯಕ್ಷ ಆನಂದ ವಿ. ಪಾಟೀಲ್ ಬಿಡುಗಡೆ ಮಾಡಿದರು.

ವಾಹನ ಸವಾರರು ಕಡ್ಡಾಯವಾಗಿ ಸಂಚಾರಿ ಚಿಹ್ನೆಗಳ ಪಾಲನೆ ಮಾಡಬೇಕು. ರಸ್ತೆ ಸುರಕ್ಷತೆಯಲ್ಲಿ ಚಾಲಕನ ಕರ್ತವ್ಯ ಬಹಳ ಮುಖ್ಯವಾಗಿದೆ. ಚಾಲನಾ ಪರವಾನಗಿ ಇಲ್ಲದೆ ವಾಹನ ಚಲಾಯಿಸಬಾರದು. ಸಂಚಾರಿ ಚಿಹ್ನೆಗಳು, ಸಂಕೇತಗಳು, ನಿಯಮ ತಿಳಿದು ಇವುಗಳನ್ನು ತಪ್ಪದೇ ಪಾಲಿಸಬೇಕೆಂದು ಖಖಿಔ ಮಿಲಿಂದಕುಮಾರ ಯಾದಗಿರಿ ಇವರು ಸೂಚಿಸಿದರು.

ರಾಜ್ಯ ಉಪಾಧ್ಯಕ್ಷರಾದ ಯಲ್ಲಪ್ಪ ಬಿ. ದೊಡಮನಿ ಮಾತನಾಡಿ,ರಾತ್ರಿ ವೇಳೆ ಎದುರಿನಿಂದ ಬರುವ ವಾಹನಗಳ ಚಾಲಕರ ಕಣ್ಣು ಕುಕ್ಕದಂತೆ ಹೆಡ್‌ಲೈಟ್ ಡಿಪ್ಪರನ್ನು ಬಳಸಬೇಕು. ಮದ್ಯಪಾನ ಮಾಡಿ ವಾಹನ ಚಲಾಯಿಸಬಾರದು. ವಾಹನಗಳ ಮಧ್ಯೆ ವೇಗಕ್ಕೆ ತಕ್ಕ ಅಂತರವನ್ನು ಕಾಪಾಡಿಕೊಂಡು ತಿರುವು ರಸ್ತೆಗಳ ಬಗ್ಗೆ ಎಚ್ಚರಿಕೆ ವಹಿಸಬೇಕು. ಪಾದಚಾರಿಗಳು ರಸ್ತೆಯ ಎಡ ಬದಿಯಿಂದಲೇ ಚಲಿಸಬೇಕು. ವಿರುದ್ಧ ದಿಕ್ಕಿನಿಂದ ಬರುವ ವಾಹನಗಳು ಬಲಭಾಗದಿಂದ ಹಾದು ಹೋಗಲು ಬಿಡಿ, ಮುಖ್ಯ ರಸ್ತೆಯಲ್ಲಿ ಸಂಚರಿಸುವ ವಾಹನವು ಹೋದ ಮೇಲೆ ಆ ರಸ್ತೆ ಪ್ರವೇಶಿಸಿರಿ ಎಂದು ತಿಳಿಸಿದರು.

ಈ ಕಾರ್ಯಕ್ರಮದಲ್ಲಿ ಮರಳು ಸಿದ್ದಯ್ಯ ಹಿರೇಮಠ್, ಚಂದ್ರಶೇಖರ್ ಅರಬೋಳ, ಎಸ್. ಎಮ್. ಪಾಟೀಲ್, ಮಂಗಿಲಾಲ್ ಮಗನಲಾಲ್ ಜೈನ, ಭೀಮನಗೌಡ ಬಿರಾದಾರ್, ಶಂಕರ ಸಿಂಘೆ, ಜುಬೀರ್ ಹೈಮದ್, ಅಂಬಯ್ಯ ಬಡಿಗೇರ್, ನರಸಯ್ಯ ಕಲಾಲ್, ಬಸಲಿಂಗಪ್ಪಗೌಡ, ಅಬ್ದುಲ್ ಆಜೀಜ್ ಹಾಗೂ ಇತರರಿದ್ದರು.

### ವಿಜಯಪುರದಲ್ಲಿ ನಿಕಾನ್ ಛಾಯಾಗ್ರಹಣ ಕಾರ್ಯಾಗಾರ ಉದ್ಘಾಟನೆ

# ಛಾಯಾಗ್ರಾಹಕರು ನಿಜ ದಾಖಲುದಾರರು :ಹರ್ಷಗೌಡ



**ಉದಯರಶ್ಮಿ ನ್ಯೂಸ್**

ವಿಜಯಪುರ: ಜಿಲ್ಲಾ ನೂತನ ಛಾಯಾಗ್ರಾಹಕರ ಸಂಘ ಮತ್ತು ಕರ್ನಾಟಕ ಛಾಯಾಗ್ರಾಹಕರ ಸಂಘದ ಸಹಯೋಗದಲ್ಲಿ ನಗರದ ಶುಭಶ್ರೀ ಹೋಟೆಲ್ ಸಭಾಂಗಣದಲ್ಲಿ ನಿಕಾನ್ ಛಾಯಾಗ್ರಹಣ ಕಾರ್ಯಗಾರ ಹಮ್ಮಿಕೊಳ್ಳಲಾಗಿತ್ತು

ಕಾರ್ಯಗಾರವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ಸಿದ್ದೇಶ್ವರ ಸಹಕಾರಿ ಬ್ಯಾಂಕಿನ ನಿರ್ದೇಶಕ ಹರ್ಷಗೌಡ ಪಾಟೀಲ್, ಜಗತ್ತಿನ ಎಲ್ಲಾ ನೋವು–ನಲಿವುಗಳ ಜೊತೆಯಲ್ಲಿ ಐತಿಹಾಸಿಕ ದಾಖಲೀಕರಣ ಮಾಡುವವರು ಛಾಯಾಗ್ರಾಹಕರು. ಛಾಯಾಗ್ರಾಹಕ–ರಿಗೆ ನಿಜವಾದ ದಾಖಲುದಾರರು ಎಂದರೆ ತಪ್ಪಾಗಲಾರದು. ಇವರ ವೃತ್ತಿ ಗೌರವಕ್ಕೆ ಎಲ್ಲರು ಸಹಕ–ರಿಸೋಣ. ಛಾಯಾಗ್ರಾಹಕರು ತಮ್ಮಲ್ಲಿ ನೋವಿದ್ದರೂ ಎದುರು ಇರುವವರಿಗೆ ಸ್ಮಾಯಿಲ್ ಪ್ಲೀಸ್ ಎಂದು ಅವರ ನಗುವನ್ನು ಸೆರೆಹಿಡಿಯುತ್ತಾರೆ. ಇಂತಹ ಛಾಯಾಗ್ರಾಹಕ ಕಲಾವಿದ–ರಿಗೆ ನಾವು ಗೌರವಿಸಬೇಕು ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ರಾಜ್ಯ ಕೆಪಿಎ ನಿರ್ದೇಶಕ ನಾಗರಾಜ್ ಟಿ. ಸಿ. ಮಾತನಾಡಿ, ರಾಜ್ಯದಲ್ಲಿ ಛಾಯಾಗ್ರಾಹಕರ ಸಂಘಟನೆ ಮಾಡುತ್ತಿದ್ದು, ವಿಜಯಪುರ ಜಿಲ್ಲೆಯ ಛಾಯಾಗ್ರಾಹಕರು ಒಗ್ಗಟ್ಟಾಗಲು ವಿಜಯಪುರ ಜಿಲ್ಲಾ ನೂತನ ಛಾಯಾಗ್ರಹಕರ ಸಂಘಕ್ಕೆ ಆಜೀವ ಸದಸ್ಯರಾಗಿ ರಾಜ್ಯ ಕೆಪಿ–ಎದಿಂದ ಸಿಗುವ ಎಲ್ಲ ಸೌಲಭ್ಯಗಳಿಗೆ ಪಾಲುದಾರರಾಗಬೇಕೆಂದು ವಿನಂತಿಸಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ರಾಜ್ಯ ಕೆಪಿಎ ನಿಕಟಪೂರ್ವ ಅಧ್ಯಕ್ಷ ಪರಮೇಶ್ ಎಸ್ ಮಾತನಾಡಿ, ರಾಜ್ಯ ಛಾಯಾಗ್ರಹಕರ ಸಂಘದ ಸಹಯೋಗದಲ್ಲಿ ವಿಜಯಪುರ ಜಿಲ್ಲಾ ನೂತನ ಛಾಯಾಗ್ರಾಹಕರ ಸಂಘ ಅಸ್ತಿತ್ವಕ್ಕೆ ಬಂದ ಕೆಲವೇ ದಿನಗಳಲ್ಲಿ ಸಂಘಟನಾತ್ಮಕ ಮತ್ತು ಕಲಿಕೆಯ ದೃಷ್ಟಿಯಿಂದ ಇಂತಹ ಕಾರ್ಯಾಗಾರಗಳನ್ನು ಏರ್ಪಡಿಸುತ್ತಿರುವುದು ಮಹತ್ವದ ಮತ್ತು ಸಂತೋಷದಾಯಕ ಕೆಲಸ ಎಂದರು.

ಕಾರ್ಯಕ್ರಮದ ಉದ್ಘಾಟನೆಗೂ ಮುನ್ನ ವಿಜಯಪುರ ಜಿಲ್ಲಾ ನೂತನ ಛಾಯಾಗ್ರಾಹಕರ ಸಂಘದ ಅಧ್ಯಕ್ಷ ರಮೇಶ ಚವ್ಹಾಣ ಎಲ್ಲಾ ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ, ಇಂತಹ ಕಾರ್ಯಾಗಾರಗಳು ಛಾಯಾಗ್ರಹಣದ ವೃತ್ತಿಗೆ ಸಂಬಂಧಿಸಿದಂತೆ ಹಲವಾರು ರೀತಿಯಲ್ಲಿ ನೂತನ, ಆಧುನಿಕ ಮಾಹಿತಿಗಳನ್ನು ಮತ್ತು ಅವುಗಳ ಕು–ರಿತು ಚರ್ಚಿಸಲು ಸಹಕಾರಿಯಾಗುತ್ತದೆ. ಇಂತಹ ಕಾರ್ಯಗಾರ ಸಂಘದಿಂದ ಮತ್ತು ಪ್ರಾಯೋಜಕರ ಸಹಕಾರದಿಂದ ಛಾಯಾಗ್ರಹಣದ ನೂತನ ವಿಷಯಗಳ ಕುರಿತು ವಿಜಯಪುರ ಜಿಲ್ಲಾ ನೂತನ ಛಾಯಾಗ್ರಾಹಕರ ಸಂಘದಿಂದ ನಿರಂತರವಾಗಿ ಹಮ್ಮಿಕೊಳ್ಳಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಆರ್ಯನ್ ಕಲರ್ ಲ್ಯಾಬಿನ ಉಮೇಶ್ ಹಿರೆದೇಸಾಯಿ, ಸ್ಕೇರ್ ಕಲರ್ ಲ್ಯಾಬನ ಪಿಂಟು ಕರ್ವಾ, ನಿಕಾನ್ ಕಂಪನಿಯ ಹಿರಿಯ ಮಾರಾಟ ವ್ಯವಸ್ಥಾಪಕ ಸುರಜ ಪ್ರಭು ಇದ್ದರು.

ಉದ್ಘಾಟನೆ ಕಾರ್ಯಕ್ರಮದ ನಂತರ ನಿಕಾನ್ ಕಂಪನಿಯ ಮೆಂಟರಾದ ಸ್ಟೇರಿನ್ ಇವರಿಂದ ನೂತನ ಕ್ಯಾಮರಾ ಮಾಡೆಲ್‌ಗಳು ಮತ್ತು ಕ್ಯಾಮೆರಾ ಟೆಕ್ನಿಕ್‌ಗಳ ಬಗ್ಗೆ ಕಾರ್ಯಗಾರ ನಡೆಯಿತು. ಬಳಿಕ ರೂಪದರ್ಶಿಗಳ ಸಹಯೋಗದಲ್ಲಿ ವಿವಾಹದ ಛಾಯಾಗ್ರಹಣದ ಕ್ಷೇತ್ರಕ್ಕೆ ಸಂಬಂಧಿಸಿದ ಛಾಯಾಗ್ರಹಣದ ಕುರಿತು ಉಪಯುಕ್ತ ಮಾಹಿತಿಗಳ ವಿವರಣೆಯನ್ನು ನೀಡಿದರು.

ಕಾರ್ಯಕ್ರಮದಲ್ಲಿ ವಿಜಯಪುರ ಜಿಲ್ಲಾ ನೂತನ ಛಾಯಾಗ್ರಹಕರ ಸಂಘದ ಪದಾಧಿಕಾರಿಗಳಾದ ಸತೀಶ್ ಕಲಾಲ, ಪ್ರಶಾಂತ್ ಪಟ್ಟಣಶೆಟ್ಟಿ, ಸುರೇಶ್ ರಾಥೋಡ್, ರಾಜುಸಿಂಗ್ ರಜಪೂತ್, ಗುರುಬಾಳಪ್ಪ ಗಲಗಲಿ, ಮಲ್ಲಿಕಾರ್ಜುನ್ ಪಾರ್ವತಿ, ಪವನ ಅಂಗಡಿ, ಮಹೇಶ್ ಕುಂಬಾರ್, ಛಾಯಾಗ್ರಾಹಕರಾದ ಮೌನೇಶ್ ಬಡಿಗೇರ್, ಸಂಗಯ್ಯ ಮಠಪತಿ, ವಿಶ್ವೇಶ್ವರಯ್ಯಾ ಮಠಪತಿ, ರವಿ ಅಕ್ಕಿ, ಬಿ.ಎಸ್. ಪಾಟೀಲ, ಬಾಳು ಕಲಾಲ, ಸಾಗರ ಗಾಯಕವಾಡ, ಬಾಳು ಕುಲಕರ್ಣಿ, ಸಂಗಮೇಶ ಹಳ್ಳಿ, ಮನೋಜ ಬಿರಾದಾರ, ಪ್ರಮೋದ್ ಕಾಜಗಾರ್, ಸುರೇಶ್ ಗುಲ್ಪಿ, ವಿಠ್ಠಲ್ ಗುಜ್ಜರ, ಚಂದ್ರಕಾಂತ, ಕೀಶೋರ ಖಂಡಾಗಳೆ, ನಾಗಯ್ಯಾ ಗಣಾಚಾರಿ, ಗೌಡಪ್ಪಗೌಡ ಬೀರಾದಾರ, ಸಹಿತ 70 ಜನ ಛಾಯಾಗ್ರಾಹಕರು ಭಾಗವಹಿಸಿ ಕಾರ್ಯಾಗಾರ ಯಶಸ್ವಿಗೊಳಿಸಿದರು.

# ಡಾ. ಸಿ.ಆರ್.ಬಿದರಿ ಹೆಸರಲ್ಲಿ ಚರ್ಮಕ್ಯಾನ್ಸರ್ ಕ್ಲಿನಿಕ್

**ಉದಯರಶ್ಮಿ ನ್ಯೂಸ್**



ವಿಜಯಪುರ: ಅಂತಾರಾಷ್ಟ್ರೀಯ ಖ್ಯಾತಿಯ ಅಥ್ಲೀಟ್ ಮತ್ತು ಖ್ಯಾತ ವೈದ್ಯ ಡಾ. ಸಿ. ಆರ್. ಬಿದರಿ ಅವರ ಹೆಸರಿನಲ್ಲಿ ಚರ್ಮಕ್ಯಾನ್ಸರ್ ಕ್ಲಿನಿಕ್ ಪ್ರಾರಂಭಿಸಲಾಗುವುದು ಎಂದು ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಕುಲಪತಿ ಡಾ. ಆರ್. ಎಸ್. ಮುಧೋಳ ತಿಳಿಸಿದ್ದಾರೆ.

ಶುಕ್ರವಾರ ನಗರದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಸ್ಕಿಲ್ಸ್ ಲ್ಯಾಬೊರೇಟರಿ ಕಟ್ಟಡದಲ್ಲಿರುವ ಸೆಂಟ್ ಫಾರ್ ಅಡ್ವಾನ್ಸಡ್ ಮೆಡಿಕಲ್ ಎಜುಕೇಶನ್ ಆಂಡ್ ರಿಸರ್ಚ್ ವಿಭಾಗದಲ್ಲಿ ಡಾ. ಸಿ. ಆರ್. ಬಿದರಿ ಅವರ ಪುಣ್ಯಸ್ಮರಣೆ ಅಂಗವಾಗಿ ಆಯೋಜಿಸಲಾದ ಕ್ಯಾನ್ಸರ್ ಕು–ರಿತು ರಾಜ್ಯ ಮಟ್ಟದ ಮುಂದುವರಿದ ವೈದ್ಯಕೀಯ ಶಿಕ್ಷಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಬಿ.ಎಲ್.ಡಿ.ಇ ಆಸ್ಪತ್ರೆಯ ಅಭಿವೃದ್ಧಿಗೆ ಮತ್ತು ಜನರಿಗೆ ಉತ್ತಮ ಆರೋಗ್ಯ ಸೇವೆ ಒದಗಿಸುವಲ್ಲಿ ಡಾ. ಸಿ. ಆರ್. ಬಿದರಿ ಅವರ ಪಾತ್ರ ಅಮೂಲ್ಯವಾಗಿದೆ. ತಮ್ಮ ಸೇವೆ ಮೂಲಕ ಮಕ್ಕಳು ಮತ್ತು ಯುವಕರು ವೈದ್ಯಕೀಯ ಶಿಕ್ಷಣ ಪಡೆಯಲು ಅವರು ಸ್ಫೂರ್ತಿಯಾಗಿದ್ದರು. ವಿಜಯಪುರ ಜಿಲ್ಲೆಯ ಜನರ ಸೇವೆಗಾಗಿಯೇ ತಮ್ಮ ವೈದ್ಯವೃತ್ತಿ ಜೀವನವನ್ನು ಮುಡುಪಾಗಿಟ್ಟಿದ್ದರು. ಅಷ್ಟೇ ಅಲ್ಲ, ವೈದ್ಯವೃತ್ತಿಯಲ್ಲಿ ಬಿಡುವಿಲ್ಲದ ಸಮಯದ ಮಧ್ಯೆಯು ಕುಟುಂಬ ನಿರ್ವಹಣೆಯಲ್ಲಿಯೂ ಇತರ ವೈದ್ಯರಿಗೆ ಮಾದರಿಯಾಗಿದ್ದಾರೆ. ಅವರ ಕನಸುಗಳನ್ನು ನಾವೆಲ್ಲರೂ ನನಸಾಗಿಸೋಣ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಸಮಕುಲಾಧಿಪತಿ ಡಾ. ಡಾ. ವೈ. ಜಯರಾಜ ಮಾತನಾಡಿ, ಡಾ. ಆರ್. ಸಿ. ಬಿದರಿ ಅವರು ಓರ್ವ ಅತ್ಯುನ್ನತ ವೈದ್ಯ, ಉತ್ತಮ ಆಡಳಿತಾಧಿಕಾರಿ, ಮಾದರಿ ಪೋಷಕರಾಗಿ ಸಮಾಜಕ್ಕೆ ಅಪೂರ್ವ ಕೊಡುಗೆ ನೀಡಿದ್ದಾರೆ. ಬಹುಮುಖಿ ವೈದ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಅವರ ತತ್ವಾದರ್ಶಗಳು, ಸೇವಾ ಮನೋಭಾವ ವೈದ್ಯಕೀಯ ಕ್ಷೇತ್ರದ ಪ್ರತಿಯೊಬ್ಬ–ರಿಗೂ ಮಾದರಿಯಾಗಿವೆ ಎಂದು ಹೇಳಿದರು.

ಕ್ಯಾನ್ಸರ್ ರೋಗ ಪತ್ತೆಯಾದರೆ ರೋಗಿಯಷ್ಟೇ ಅಲ್ಲ, ರೋಗಿಯ ಇಡೀ ಕುಟುಂಬದ ಮೇಲೆ ಪರಿಣಾಮ ಬೀರುತ್ತದೆ. ಆದ್ದರಿಂದ ಈ ಕುರಿತು ಅರಿವು ಮತ್ತು ಜಾಗೃತಿ ಅಗತ್ಯ. ಆರಂಭಿಕ ಹಂತದಲ್ಲಿಯೇ ರೋಗಪತ್ತೆ ಮಾಡಿ ಸೂಕ್ತ ಚಿಕಿತ್ಸೆ ನೀಡಿದರೆ ಈ ರೋಗವನ್ನು ನಿಯಂತ್ರಿಸಬಹುದಾಗಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮ ಸಂಯೋಜಕ ಡಾ. ಆರ್. ಸಿ. ಬಿದರಿ ಮಾತನಾಡಿ, ನಮ್ಮ ತಂದೆ ಡಾ. ಸಿ.ಆರ್.ಬಿದ–ರಿಯವರು ತಮ್ಮ ಬಳಿಗೆ ಬರುವ ರೋಗಿಗಳ ಆರೋಗ್ಯ ಸಮಸ್ಯೆಗಳನ್ನು ಶಾಂತಚಿತ್ತದಿಂದ ಆಲಿಸಿ ನಗುಮುಖದ ಮೂಲಕ ಚಿಕಿತ್ಸೆ ನೀಡಿ ರೋಗಿಗಳ ಮೊಗದಲ್ಲಿ ಮಂದಹಾಸ ಮೂಡಿಸುತ್ತಿದ್ದರು. ಅಲ್ಲದೇ, ರೋಗಿಗಳಲ್ಲಿರುವ ಆತಂಕವನ್ನು ದೂರ ಮಾಡುತ್ತಿದ್ದರು. ಅವರ ಜ್ಞಾಪಕ ಶಕ್ತಿಯು ಅಪಾರವಾಗಿತ್ತು. ಆಗಾಗ ಆರೋಗ್ಯ ಶಿಬಿರಗಳನ್ನು ನಡೆಸಿ ರೋಗಿಗಳಿಗೆ ಸುಲಭವಾಗಿ ಚಿಕಿತ್ಸೆ ಒದಗಿಸುತ್ತಿದ್ದರು ಎಂದು ಹೇಳಿದರು.

ಬಿ.ಎಲ್.ಡಿ.ಇ ಡೀಮ್ಡ್ ವಿವಿಯ ಸಮಕುಲಪತಿ ಡಾ.ಅರುಣ ಇನಾಮದಾರ ಮಾತನಾಡಿ, ಡಾ. ಸಿ. ಆರ್. ಬಿದರಿಯವರು ಬಹುಮುಖಿ ವೈದ್ಯರಾಗಿದ್ದರು. ಅವರು ಫಿಜಿಶಿಯನ್, ಮಕ್ಕಳ ವೈದ್ಯ ಮಾತ್ರವಲ್ಲ ಚರ್ಮರೋಗ ತಜ್ಞರೂ ಆಗಿದ್ದರು. ಅವರ ಸ್ಮರಣಾರ್ಥ ಬಿ.ಎಲ್.ಡಿ.ಇ ಆಸ್ಪತ್ರೆಯ ಚರ್ಮರೋಗ ವಿಭಾಗದಲ್ಲಿ ಚರ್ಮಕ್ಯಾನ್ಸರ್ ಕ್ಲಿನಿಕ್ ಪ್ರಾರಂಭಿಸಲಾಗುವುದು. ಅಲ್ಲದೇ, ಪಿ.ಡಿ.ಟಿ(ಪೋಟೋಡೈನಾಮಿಕ್ ಥೆರಪಿ) ಚಿಕಿತ್ಸೆ ನೀಡಲಾಗುವುದು ಎಂದು ತಿಳಿಸಿದರು.

ಇದಕ್ಕೂ ಮೊದಲು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗಣ್ಯರು ಡಾ. ಸಿ. ಆರ್. ಬಿದ–ರಿಯವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಬೆಂಗಳೂರು ಎಚ್. ಸಿ. ಈ ಆಸ್ಪತ್ರೆಯ ಖ್ಯಾತವೈದ್ಯರಾದ ಡಾ. ಲೋಹಿತ ಜಿ., ಡಾ. ಅಭಿಲಾಷಾ ನಾರಾಯಣ, ಡಾ. ಪ್ರಭು ಎಸ್. ನೇಸರ್ಗಿಕ ಮತ್ತು ಡಾ. ನಟರಾಜ ಕೆ. ಎಸ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಡಾ. ಸಿ. ಆರ್. ಬಿದರಿಯವರ ಪುತ್ರಿ ಆಶಾ. ಎಂ. ಪಾಟೀಲ, ಡಾ. ಅರವಿಂದ ಪಾಟೀಲ, ಡಾ. ಎಚ್. ಟಿ. ಲತಾದೇವಿ, ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ, ಡಾ. ಎಸ್. ಎನ್. ಬೆಂತೂರ, ಡಾ. ಬಿ. ಸಿ. ಉಪ್ಪಿನ, ಡಾ. ಅನುಜಾ ಎಂ. ಕೆ, ಡಾ. ವಿಜಯ ಕಟ್ಟಿ, ಡಾ. ಶೈಲಜಾ ಪಾಟೀಲ, ಡಾ. ವಿಜಯಕುಮಾರ ವಾರದ, ಡಾ. ಸುಮಂಗಲಾ ಪಾಟೀಲ, ಡಾ. ಎಂ. ಆರ್. ಗುಡದಿನ್ನಿ, ಡಾ. ಉದಯಕುಮಾರ ನುಚ್ಚಿ, ಡಾ. ಶ್ರೀಧರ ಪಾಟೀಲ, ಡಾ. ವೆಂಕಟರಮಣ ಸತೀಶ ಜೋಷಿ ಮುಂತಾದವರು ಉಪಸ್ಥಿತರಿದ್ದರು.

ಉಪಪ್ರಾಚಾರ್ಯ ಡಾ. ಆನಂದ ಪಾಟೀಲ ಸ್ವಾಗತಿಸಿದರು. ಡಾ. ಪ್ರತೀಕ್ಷಾ ಮತ್ತು ಡಾ. ಗೌತಮ ನಿರೂಪಿಸಿದರು. ರಜಿಸ್ಟ್ರಾರ್ ಡಾ. ಆರ್. ವಿ. ಕುಲಕರ್ಣಿ ವಂದಿಸಿದರು.

ಉದ್ಘಾಟನೆ ಕಾರ್ಯಕ್ರಮ ನಂತರ ಕ್ಯಾನ್ಸರ್ ಕುರಿತು ತಜ್ಞವೈದ್ಯರಿಂದ ದಿನವಿಡಿ ನಾನಾ ವಿಷಯಗಳ ಕುರಿತು ಗೋಷ್ಠಿಗಳು ನಡೆದವು.

# ಓತಿಹಾಳದಲ್ಲಿ ನರೇಗಾ ದಿವಸ ಆಚರಣೆ




**ಉದಯರಶ್ಮಿ ನ್ಯೂಸ್**

ಸಿಂದಗಿ: ಗ್ರಾಮದಲ್ಲಿರುವ ಪ್ರತಿ ಕುಟುಂಬ ನರೇಗಾ ಯೋಜನೆಯ ಸಹಾಯಧನ ಪಡೆಯಲು ಅರ್ಹತೆ ಹೊಂದಿದ್ದು ಕೃಷಿ ಹೊಂಡ, ಬದು ನಿರ್ಮಾಣ, ಕುರಿ ಶೆಡ್, ದನದ ಶೆಡ್, ಕೋಳಿ ಶೆಡ್, ಇಂಗು ಗುಂಡಿ ಹೀಗೆ ಹಲವು ವ್ಯಯಕ್ತಿಕ ಯೋಜನೆಯ ಕಾಮಗಾರಿಗಳ ಸದುಪಯೋಗ ಪಡೆಯಬೇಕು ಎಂದು ಸಹಾಯಕ ನಿರ್ದೇಶಕ ನಿತ್ಯಾನಂದ ಯಲಗೋಡ ಹೇಳಿದರು.

ತಾಲೂಕಿನ ಬಂದಾಳ ಗ್ರಾಮ ಪಂಚಾಯತ್ ವ್ಯಾಪ್ತಿಯ ಓತಿಹಾಳ ಗ್ರಾಮದ ಅಮೃತ ಸರೋವರ ದಡದಲ್ಲಿ ಹಮ್ಮಿಕೊಂಡ ನರೇಗಾ ದಿವಸ ಆಚರಣೆ ಕಾರ್ಯಕ್ರಮವನ್ನು ಕೇಕ್ ಕತ್ತರಿಸುವ ಮೂಲಕ ಚಾಲನೆ ನೀಡಿ ಮಾತನಾಡಿದ ಅವರು, ಬೇರೆ ಕಡೆ ಕೆಲಸಕ್ಕೆ ಹೋಗಬಯಸುವವರು ಕೂಡಾ ಈ ಯೋಜನೆಯಲ್ಲಿ ಕೆಲಸ ಮಾಡಿ ದಿನಕ್ಕೆ 316 ರೂ. ಗಳಂತೆ ವರ್ಷಕ್ಕೆ ಒಂದು ಕುಟುಂಬ 100 ದಿನ ಕೆಲಸ ಮಾಡಲು ಅರ್ಹರರು ಆದ್ದರಿಂದ ಇದರ ಪ್ರಯೋಜನ ಎಲ್ಲರೂ ಪಡೆಯಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಸವರಾಜ್ ಶಹಾಪುರ, ಕಾರ್ಯದರ್ಶಿ ರಾಜಾಸಾಬ್ ಮುಜಾವರ್, ಗ್ರಾಮ ಪಂಚಾಯತ್ ಸದಸ್ಯರು ಶ್ರೀ ಕೇಶುರಾಯ ಮಕಣಪುರ, ಮಲ್ಲು ನಾಕೇತ್ತಿನ, ರಾಜು ವಠಾರ, ಮಲ್ಲು ನಾಟಿಕಾರ, ಹವಳಪ್ಪ ನಾಟಿ–ಕಾರ, ಶಿವಶರಣ ವಂದಗನೂರ, ಇಂಜಿನಿಯರ್ ಸಂತೋಷ್ ಪಾಸೋಡಿ, ಶಂಕರ ಪೂಜಾರಿ, ಸಾಗರ ಶೆಟ್ಟಿ, ಆನಂದ ವಾಲಿಕಾರ, ಆರಿಫ್ ಶೇಖಜಿ, ರಮೇಶ ನಿಗಡಿ, ಬಸವರಾಜ್ ಗೊರವ, ಸತೀಶ್ ಮತ್ತು ತಾಲೂಕಿನ ಗ್ರಾಮ ಕಾಯಕ ಮಿತ್ರರು, ಸಿಬ್ಬಂದಿಗಳು ಗ್ರಾಮಸ್ಥರು ಹಾಜರಿದ್ದರು. ಭೀಮರಾಯ ಚೌಧರಿ ಕಾರ್ಯಕ್ರಮ ನಿರ್ವಹಿಸಿದರು.

### ದಿ. ಡಾ. ಸಿ.ಆರ್.ಬಿದರಿ ಪುಣ್ಯಸ್ಮರಣೆ । ಉಚಿತ ಆರೋಗ್ಯ ತಪಾಸಣೆ & ಚಿಕಿತ್ಸಾ ಶಿಬಿರ

# 263 ಜನರ ಆರೋಗ್ಯ ಉಚಿತ ತಪಾಸಣೆ

**ಉದಯರಶ್ಮಿ ನ್ಯೂಸ್**



ವಿಜಯಪುರ: ದಿವಂಗತ ಡಾ. ಸಿ.ಆರ್.ಬಿದರಿ ಅವರ ಪುಣ್ಯಸ್ಮರಣೆ ಅಂಗವಾಗಿ ವಿಜಯಪುರ ತಾಲೂಕಿನ ಹೊನಗನಹಳ್ಳಿ ಮತ್ತು ಬಬಲೇಶ್ವರ ತಾಲೂಕಿನ ದೇವರಗೆಣ್ಣೂರ ಗ್ರಾಮಗಳಲ್ಲಿ ಮಹಿಳೆಯರು ಮತ್ತು ಚಿಕ್ಕಮಕ್ಕಳಿಗಾಗಿ ಉಚಿತ ಆರೋಗ್ಯ ತಪಾಸಣೆ ಹಾಗೂ ಚಿಕಿತ್ಸಾ ಶಿಬಿರ ಶುಕ್ರವಾರ ನಡೆಯಿತು.

ಹೊನಗನಹಳ್ಳಿ ಗ್ರಾಮದ ಶ್ರೀ ಮಂಗಮ್ಮದೇವಿ ಪ್ರೌಢಶಾಲೆಯಲ್ಲಿ ನಡೆದ ಶಿಬಿರವನ್ನು ಶಶಿ ಬಿದರಿ ಉದ್ಘಾಟಿಸಿದರು.


ಈ ಶಿಬಿರದಲ್ಲಿ ಪ್ರಸೂತಿ ಮತ್ತು ಸ್ರೀ ರೋಗ ವಿಭಾಗದ ಡಾ. ಶೋಭಾ ಶಿರಗೂರ ಮತ್ತು ಚಿಕ್ಕ ಮಕ್ಕಳ ವೈದ್ಯಕೀಯ ವಿಭಾಗದ ಡಾ. ಎಚ್. ಆರ್. ಬಿಜಾಪುರೆ ಅವರು ಒಟ್ಟು 187 ಜನರ ಆರೋಗ್ಯ ತಪಾಸಣೆ ನಡೆಸಿದರು. ಅಲ್ಲದೇ, 13 ಜನರಿಗೆ ಹೆಚ್ಚಿನ ತಪಾಸಣೆಗೆ ವಿಜಯಪುರದ ಬಿ.ಎಲ್.ಡಿ.ಇ ಆಸ್ಪತ್ರೆಗೆ ಶಿಫಾರಸು ಮಾಡಿದರು.

ದೇವರಗೆಣ್ಣೂರ ಗ್ರಾಮದ ಮಹಲಕ್ಷಿ ದೇವಸ್ಥಾನದ ಬಳಿ ಇರುವ ಯಾತ್ರಿ ನಿವಾಸದಲ್ಲಿ ನಡೆದ ಆರೋಗ್ಯ ಶಿಬಿರದಲ್ಲಿ ಪ್ರಸೂತಿ ಮತ್ತು ಸ್ರೀ ರೋಗ ವಿಭಾಗದ ಡಾ. ಶ್ರೀದೇವಿ ಕೋರಿ ಮತ್ತು ಚಿಕ್ಕ ಮಕ್ಕಳ ವೈದ್ಯಕೀಯ ವಿಭಾಗ ಡಾ. ಅನಿಲಕುಮಾರ ಸಜ್ಜನ ಆರೋಗ್ಯ ತಪಾಸಣೆ ನಡೆಸಿದರು.

ಈ ಶಿಬಿರದಲ್ಲಿ ಒಟ್ಟು 263 ಜನರ ಆರೋಗ್ಯ ತಪಾಸಣೆ ನಡೆಸಿದರು. ಅಲ್ಲದೇ, 95 ಜನರಿಗೆ ಹೆಚ್ಚಿನ ತಪಾಸಣೆಗೆ ವಿಜಯಪುರದ ಬಿ.ಎಲ್.ಡಿ.ಇ ಆಸ್ಪತ್ರೆಗೆ ಶಿಫಾರಸು ಮಾಡಿದರು.

# ಜಗದೀಶ ತಳವಾರ ನೇಮಕಕ್ಕೆ ಆಗ್ರಹ

**ಉದಯರಶ್ಮಿ ನ್ಯೂಸ್**



ಯಡ್ರಾಮಿ: ಜೇವರ್ಗಿ ಭಾಜಪ ತಾಲೂಕು ಘಟಕಕ್ಕೆ ಬಿಜೆಪಿ ಕಾರ್ಯಕರ್ತ ಜಗದೀಶ ತಳವಾರ ಮಳ್ಳಿ ಅವರನ್ನು ನೇಮಿಸುವಂತೆ ಪಕ್ಷದ ಕಾರ್ಯಕರ್ತರು ಪಕ್ಷದ ಮುಖಂಡರಲ್ಲಿ ಒತ್ತಾಯಿಸಿದ್ದಾರೆ.

ಜಗದೀಶ ತಳವಾರ ಈ ಹಿಂದೆ ತಾಲೂಕು ಘಟಕದ ಪ್ರಧಾನ ಕಾರ್ಯದರ್ಶಿಯಾಗಿ ಹಾಗೂ ಪಕ್ಷದ ವಿವಿಧ ಹುದ್ದೆಗಳಲ್ಲಿ ಕೆಲಸ ಮಾಡುವ ಮೂಲಕ ಸಕ್ರೀಯ ಮತ್ತು ಕ್ರಿಯಾಶೀಲ ಕಾರ್ಯಕರ್ತರಾಗಿ ಮೂರು ದಶಕಗಳಿಂದಲೂ ಪಕ್ಷಕ್ಕಾಗಿ ದುಡಿದಿದ್ದಾರೆ. ತಳವಾರ ಅವರ ಪಕ್ಷ ನಿಷ್ಠೆ, ಸಂಘಟನಾ ಶಕ್ತಿಯನ್ನು ಪರಿಗಣಿಸಿ ಅವರನ್ನು ಜೇವರ್ಗಿ ಭಾಜಪ ತಾಲೂಕು ಘಟಕದ ಅಧ್ಯಕ್ಷ ಸ್ಥಾನಕ್ಕೆ ನೇಮಿಸುವಂತೆ, ಯಡ್ರಾಮಿ ಶಕ್ತಿ ಕೇಂದ್ರದ ಅಧ್ಯಕ್ಷ ರುದ್ರಗೌಡ ಬಿರಾದಾರ ನಾಗರಹಳ್ಳಿ, ರಾಚಣ್ಣ ತಳವಾರ ಯಡ್ರಾಮಿ, ಶಂಕರಗೌಡ ಸುಂಬದ, ಮಂಜುನಾಥ ಹೂಗಾರ್, ಶ್ರೀಶೈಲ ಮಡಿವಾಳರ , ಸಂತೋಷ ಕೊರವಾರ, ರಾಘವೇಂದ್ರ ಕುಳಗೇರಿ, ಹಣಮಂತ ಕಾಚಾಪುರ, ಬರಗೂಡಿ ಬೀರಾಳ, ಬಸನಗೌಡ. ಎಸ್. ಪಾಟೀಲ್ ಮಳ್ಳಿ, ಮಲ್ಲಣ್ಣ ಕೊಗಟನೂರ, ಮಂಜುನಾಥ ಅಗಸರ, ವೀರೇಶ ಬ್ಯಾಕೋಡ, ಈರಣ್ಣ ಹೆಳವರ, ಈರಣ್ಣ ಸುಂಕದ ಯಡ್ರಾಮಿ ಇತರರು ಒತ್ತಾಯಿಸಿದ್ದಾರೆ.

# ಒಳಮೀಸಲಾತಿ: ಬಂಜಾರ ಸಮುದಾಯದಿಂದ ದಿಢೀರ ಪ್ರತಿಭಟನೆ

**ಉದಯರಶ್ಮಿ ನ್ಯೂಸ್**



ಮುದ್ದೇಬಿಹಾಳ: ಪಟ್ಟಣದಲ್ಲಿ ತರಾತುರಿಯಲ್ಲಿ ಒಳ ಮೀಸಲಾತಿ ಜಾರಿಗೆ ತರಲು ಪ್ರಯತ್ನ ನಡೆಸುತ್ತಿದ್ದಾರೆ ಎಂದು ಆರೋಪಿಸಿ ಸರ್ಕಾರದ ವಿರುದ್ಧ ಬಂಜಾರ ಸಮುದಾಯದ ಮುಖಂಡರು ಪಟ್ಟಣದ ವಿಬಿಸಿ ಹೈಸ್ಕೂಲ್ ಮೈದಾನದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕು ಸ್ಥಾಪನೆ ಕಾರ್ಯಕ್ರಮದ ಬೃಹತ್ ಟೆಂಟ್ ಬಳಿ ದಿಢೀರನೆ ಪ್ರತಿಭಟನೆಗೆ ಇಳಿದರು.

ಈ ವೇಳೆ ಮಾತನಾಡಿದ ಬಿಜೆಪಿ ವೈದ್ಯಕೀಯ ಪ್ರಕೋಷ್ಠದ ಜಿಲ್ಲಾ ಸಂಚಾಲಕ ಡಾ.ಬಾಬುರಾಜೇಂದ್ರ ನಾಯಕ, ಸಿದ್ದರಾಮಯ್ಯ ಸರ್ಕಾರ ಕೇವಲ ವೋಟ್ ಬ್ಯಾಂಕ್ ಅಸ್ತ್ರ ಬಳಸುತ್ತಿದೆ. ಮುಖ್ಯಮಂತ್ರಿಗಳ ಸಾಮಾಜಿಕ ನ್ಯಾಯ ಕೇವಲ ಭಾಷಣ–ಕಷ್ಟೇ ಮಾತ್ರ ಸೀಮಿತವಾಗಿದೆ. ತಾವೂ ಒಬ್ಬ ಹಿಂದುಳಿದ ಸಮುದಾಯದಿಂದ ಬಂದವರಾಗಿ ಅತ್ಯಂತ ಹಿಂದುಳಿದ ಸಮಾಜವಾದ ಬಂಜಾರ ಸಮಾಜಕ್ಕೆ ಅನ್ಯಾಯ ಎಸಗುತ್ತಿದ್ದಾರೆ. ತರಾತು–ರಿಯಾಗಿ ಒಳ ಮೀಸಲಾತಿ ಜಾರಿಗೆ ತರಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಪ್ರಯತ್ನಿಸುತ್ತಿರುವ ಈ ಸರ್ಕಾರದ ನಡೆ ಅವೈಜ್ಞಾನಿಕವಾಗಿದೆ. ಇದನ್ನು ರಾಜ್ಯದಾದ್ಯಂತ ಬಂಜಾರ ಸಮುದಾಯ ತೀವ್ರವಾಗಿ ಖಂಡಿಸುತ್ತದೆ ಎಂದರು.

ಪ್ರತಿಭಟನಾಕಾರರು ಕಪ್ಪು ಬಾವುಟ ಪ್ರದರ್ಶಿಸಲು ಮುಂದಾದಾಗ ಪೊಲೀಸರು ಬಂಜಾರ ಸಮುದಾಯದ ಮುಖಂಡರನ್ನು ಬಂಧಿಸಿದ್ದಾರೆ.

ಹೆಚ್ಚಿನ ಸಂಖ್ಯೆಯಲ್ಲಿ ಸೇ–ರಿದ್ದ ಬಂಜಾರ ಯುವಕರು ಮುಖ್ಯಮಂತ್ರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರ ಹಾಕುತ್ತಿದ್ದಂತೆ, ಪ್ರತಿಭಟನಾಕಾರರನ್ನು ಮನವೊಲಿಸಲು ಪೊಲೀಸರು ವಿಫಲ ಪ್ರಯತ್ನ ನಡೆಸಿ ಅವರನ್ನು ವಶಕ್ಕೆ ಪಡೆದು ಸಂಜೆ ಬಿಡುಗಡೆಗೊಳಿಸಿದರು.

ಸಂಜೆ ಪ್ರತಿಭಟನಾಕಾರರು ಮಾಧ್ಯಮದವರೊಡನೆ ಮಾತನಾಡಿ, ನ್ಯಾಯ ನೀಡಬೇಕಾಗಿರುವ ಸರ್ಕಾರ ನ್ಯಾಯ ಕೋರುವವರನ್ನು ಹತ್ತಿಕ್ಕುವ ಪ್ರಯತ್ನ ನಡೆಸುತ್ತಿದೆ. ಇಂತಹ ನಡೆಗಳ ಮೂಲಕ ಕಾಂಗ್ರೆಸ್ ಸರಕಾರ ತಾನು ಜನ ವಿರೋಧಿ ಎಂಬುದನ್ನು ಮತ್ತೆ ಮತ್ತೆ ಸಾಬೀತುಪಡಿಸುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಡಾ. ಬಸವರಾಜ್ ಚೌಹಾಣ್, ರಾಕೇಶ ರಜಪೂತ್, ಶಿವಾನಂದ ಲಮಾಣಿ, ಶಿವರಾಜ ರಾಠೋಡ್, ಮೋಹನ್ ಚವಾಣ್, ಕೃಷ್ಣ ಜಾಧವ್, ಪವನಕುಮಾರ್ ಲಮಾಣಿ, ಸಚಿನ ಚವ್ಹಾಣ ಸೇರಿದಂತೆ ಅನೇಕ–ರಿದ್ದರು.

ಸಿದ್ದರಾಮಯ್ಯನವರು ದಲಿತ ಸಮುದಾಯವನ್ನು ಒಡೆಯುವ ದುರಾಲೋಚನೆ ಬಿಡದಿದ್ದರೆ, ಇನ್ನು ಮುಂದೆ ಅವರು ಭಾಗವಹಿಸುವ ಪ್ರತಿಯೊಂದು ಕಾರ್ಯಕ್ರಮಗಳಿಗೆ ತೆರಳಿ ಕಪ್ಪು ಬಾವುಟ ಪ್ರದರ್ಶನ ಮಾಡುತ್ತೇವೆ. ಒಳಮೀಸಲಾತಿಯಲ್ಲಿ ಬಂಜಾರಾ ಸಮುದಾಯಕ್ಕೆ ತುಂಬಾ ಅನ್ಯಾಯವಾಗುತ್ತಿದೆ. ಕೇಂದ್ರ ಸರಕಾರಕ್ಕೆ ಶಿಫಾರಸ್ಸು ಮಾಡಿರುವ ಒಳಮೀಸಲಾತಿಯನ್ನು ಹಿಂದಕ್ಕೆ ಪಡೆಯಲೇಬೇಕು. ಒಂದು ವೇಳೆ ಪಡೆಯದೇ ಇದ್ದರೆ ರಾಜ್ಯದಾದ್ಯಂತ ಬಂಜಾರ ಸಮುದಾಯ ಮುಂದಿನ ಲೋಕಸಭಾ ಚುನಾವಣೆಯಲ್ಲಿ ತಕ್ಕ ಉತ್ತರ ನೀಡುತ್ತದೆ ಎಂದು ಪ್ರತಿಭಟನಾಕಾರರು ಎಚ್ಚರಿಕೆ ನೀಡಿದರು.

# ಫೆ.4ರಂದು ಬಿಎಲ್ಡಿಇ ಅಂತರ ಶಾಲಾ ಕಾಲೇಜು ಕ್ರೀಡಾಕೂಟ

**ಉದಯರಶ್ಮಿ ನ್ಯೂಸ್**

ವಿಜಯಪುರ: ಅಂತಾರಾಷ್ಟ್ರೀಯ ಖ್ಯಾತಿಯ ಅಥ್ಲೀಟ್ ಮತ್ತು ಖ್ಯಾತ ವೈದ್ಯ ದಿ. ಡಾ. ಸಿ. ಆರ್. ಬಿದ–ರಿಯವರ ಪುಣ್ಯಸ್ಮರಣೆ ಅಂಗವಾಗಿ ಫೆಬ್ರುವರಿ 4 ರಂದು ರವಿವಾರ ಬಿ. ಎಲ್. ಡಿ. ಇ ಸಂಸ್ಥೆಯ ಅಂತರ ಶಾಲಾ ಕಾಲೇಜುಗಳ ಅಥ್ಲೇಟಿಕ್ ಕ್ರೀಡಾಕೂಟ ಆಯೋಜಿಸಲಾಗಿದ್ದು, ಬಿ.ಎಲ್.ಡಿ. ಸಂಸ್ಥೆಯ ಬಂಗಾರಮ್ಮ ಸಜ್ಜನ ಮಹಿಳಾ ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿನಿಯೂ ಆಗಿರುವ ಅಂತಾರಾಷ್ಟ್ರೀಯ ಕ್ರಿಕೆಟ್ ಮಹಿಳಾ ಆಟಗಾರ್ತಿ ರಾಜೇಶ್ವರ ಗಾಯಕವಾಡ ಉದ್ಘಾಟಿಸಲಿದ್ದಾರೆ.

ಈ ಕುರಿತು ಮಾಧ್ಯಮ ಪ್ರಕಟಣೆ ನೀಡಿರುವ ಬಿ.ಎಲ್.ಡಿ.ಇ ಸಂಸ್ಥೆಯ ಮುಖ್ಯ ಆಡಳಿತಾಧಿಕಾರಿ ಡಾ. ಆರ್. ಬಿ. ಕೊಟ್ನಾಳ ಮತ್ತು ಕ್ರೀಡಾ ನಿರ್ದೇಶಕ ಪ್ರೊ. ಎಸ್. ಎಸ್. ಕೋರಿ, ಫೆಬ್ರವರಿ 4 ರಂದು ಬೆಳಿಗ್ಗೆ 9 ಗಂಟೆಗೆ ಬಿ.ಎಲ್.ಡಿ.ಇ ಡೀಮ್ಡ್ ವಿಶ್ವವಿದ್ಯಾಲಯದ ಶ್ರೀ ಬಿ. ಎಂ. ಪಾಟೀಲ ಮೆಡಿಕಲ್ ಕಾಲೇಜಿನ ಕ್ರೀಡಾಂಗಣದಲ್ಲಿ ಪ್ರಾರಂಭವಾಗಲಿದೆ. ಬಿ.ಎಲ್.ಡಿ.ಇ ಸಂಸ್ಥೆಯ ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ತಾಂತ್ರಿಕ ಹಾಗೂ ಅಭಿಯಾಂತ್ರಿಕ ಮಹಾವಿದ್ಯಾಲಯದ ಆಶ್ರಯದಲ್ಲಿ ನಡೆಯಲಿರುವ ಈ ಕ್ರೀಡಾಕೂಟವನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಮಹಿಳಾ ಆಟಗಾರ್ತಿ ಡಾ. ರಾಜೇಶ್ವರಿ ಗಾಯಕವಾಡ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ಸಂಸ್ಥೆಯ ಪದಾಧಿಕಾರಿಗಳು, ಶಾಲೆ–ಕಾಲೇಜು ಪ್ರಾಂಶುಪಾಲರು ಮತ್ತು ಸಿಬ್ಬಂದಿ ಭಾಗವಹಿಸಿಲಿದಾರೆ ಎಂದು ತಿಳಿಸಿದ್ದಾರೆ.

ದಿ. ಡಾ. ಸಿ. ಆರ್.ಬಿದ–ರಿಯವರು ಅಂತಾರಾಷ್ಟ್ರೀಯ ಖ್ಯಾತ ಓಟಗಾರರಾಗಿದ್ದು, ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತ ದೇಶವನ್ನು ಪ್ರತಿನಿಧಿಸಿದ್ದರು. ವೈದ್ಯಕೀಯ ವೃತ್ತಿಜೀವನದ ಜೊತೆಗೆ ಕ್ರೀಡಾ ಹವ್ಯಾಸ ಬೆಳಸಿಕೊಂಡಿದ್ದರು. ಜನಸಾಮನ್ಯರು ಮತ್ತು ವಿದ್ಯಾರ್ಥಿಗಳು ಉತ್ತಮ ಆರೋಗ್ಯದ ಮತ್ತು ಕ್ರೀಡಾ ಹವ್ಯಾಸವನ್ನು ಬೆಳಸಿಕೊಳ್ಳಬೇಕು ಎಂದು ಅವರು ಸದಾ ಹಂಬಲಿಸುತ್ತಿದ್ದರು. ದಿ. ಡಾ. ಸಿ. ಆರ್. ಬಿದರಿಯವರ ಕುಟುಂಬದವರು ಡಾ.ಬಿದರಿಯವರ ಕನಸನ್ನು ನನಸು ಮಾಡಲು ಪ್ರತಿವರ್ಷ ಬಿ.ಎಲ್.ಡಿ.ಇ ಸಂಸ್ಥೆಯ ನಾನಾ ಶಾಲೆ– ಕಾಲೇಜುಗಗಳ ಅಂತರ್ ಶಾಲಾ ಅಥ್ಲೇಟಿಕ್ ಕ್ರೀಡಾಕೂಟವನ್ನು ಆಯೋಜಿಸಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಈ ಕ್ರೀಡಾಕೂಟದಲ್ಲಿ ಸುಮಾರು 850 ಕ್ರೀಡಾಪಟುಗಳು ಭಾಗವಹಿಸಲಿದ್ದಾರೆ. ಡಾ. ಸಿ. ಆರ್. ಬಿದರಿಯವರು ಕುಟುಂಬದವರು ಕ್ರೀಡಾಕೂಟದ ನಾಲ್ಕು ವಿಭಾಗಗಳ ಓಟದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರಥಮ ಸ್ಥಾನ ಪಡೆದ ಕ್ರೀಡಾಪಟುಗಳಿಗೆ ಒಟ್ಟು ಎಂಟು ಬಂಗಾರದ ಪದಕಗಳನ್ನು ವಿತರಿಸಲಿದ್ದಾರೆ. ಫೆ. 4ರಂದು ಸಂಜೆ 5 ಗಂಟೆಗೆ ಕ್ರೀಡಾಕೂಟದ ಸಮಾರೋಪ ನಡೆಯಲಿದೆ ಎಂದು ಡಾ. ಆರ್. ಬಿ. ಕೊಟ್ನಾಳ ಮತ್ತು ಪ್ರೊ. ಎಸ್. ಎಸ್. ಕೋರಿ ತಿಳಿಸಿದ್ದಾರೆ.

# ಕಾಯ ಕಣ್ಮರೆಯಾದರೂ ನೆನಹು ಶಾಶ್ವತ :ರಂಭಾಪುರಿ ಶ್ರೀ

**ಉದಯರಶ್ಮಿ ನ್ಯೂಸ್**

ಆಲಮಟ್ಟಿ: ಮಾನವ ಜೀವನ ಅತ್ಯಮೂಲ್ಯ. ಬಹು ಜನ್ಮಗಳ ಪುಣ್ಯದ ಫಲವಾಗಿ ಮಾನವ ಜೀವನ ಪ್ರಾಪ್ತವಾಗಿದೆ, ಕಾಯ ಕಣ್ಮರೆಯಾದರೂ ನೆನಹು ಶಾಶ್ವತವಾಗಿ ಉಳಿಯುವ ಹಾಗೆ ಬದುಕುವುದೇ ನಿಜವಾದ ಬದುಕು ಎಂದು ಬಾಳೆಹೊನ್ನೂರಿನ ಶ್ರೀ ರಂಭಾಪುರಿ ಡಾ ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.

ತಾಲ್ಲೂಕಿನ ಚಿಮ್ಮಲಗಿ ಭಾಗ–2 ಗ್ರಾಮದಲ್ಲಿ ಶುಕ್ರವಾರ ಸಂಜೆ ಜರುಗಿದ ಅರಳೆಲೆ ಕಟ್ಟಿಮನಿ ಹಿರೇಮಠದ ಲಿಂ.ಶ್ರೀ ನೀಲಕಂಠ ಸ್ವಾಮೀಜಿಗಳ ಪ್ರಥಮ ಪುಣ್ಯಸ್ಮರಣೆ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.



ಮಾನವ ಜೀವನ ಶಾಶ್ವತವಲ್ಲ, ಹುಟ್ಟಿದ ಮನುಷ್ಯ ಒಂದಿಲ್ಲ ಒಂದು ದಿನ ಅಗಲುವುದು ಅನಿವಾರ್ಯ, ಹುಟ್ಟುವಾಗ ಹೆಸರು ಇರುವುದಿಲ್ಲ, ಉಸಿರು ಇರುತ್ತದೆ, ಉಸಿರು ನಿಂತರೂ ಹೆಸರು ಉಳಿಯುವ ಹಾಗೆ ಬದುಕಿದವರು ಲಿಂ. ನೀಲಕಂಠ ಶ್ರೀಗಳು ಎಂದರು.

ಭಕ್ತ ಸಂಕುಲಕ್ಕೆ ಅವರು ಕೊಟ್ಟ ಸಂಸ್ಕಾರ ಮತ್ತು ಶೋಭಾಮೃತ ಜೀವನ ಶ್ರೇಯಸ್ಸಿಗೆ ಸ್ಪೂರ್ತಿ ತಂದಿದೆ, ಲಿಂ. ರಂಭಾಪುರಿ ವೀರಗಂಗಾಧರ ಜಗದ್ಗುರುಗಳ ಸೇವೆಯನ್ನು ಮಾಡಿ, ಅವರ ಅಂತಃಕರಣ ಆಶೀರ್ವಾದಕ್ಕೆ ಪಾತ್ರರಾಗಿದ್ದರು. ಅವರು ನಮ್ಮೆಲ್ಲರನ್ನು ಅಗಲಿ ವರ್ಷ ಕಳೆದರೂ ಅವರ ನೆನಪು ಸದಾ ಹಸಿರಾಗಿದೆ ಎಂದರು.

ಪೀಠಾಧ್ಯಕ್ಷರಾದ ಸಿದ್ಧರೇಣುಕ ಸ್ವಾಮೀಜಿ ಮಾತನಾಡಿ, ಉಜ್ವಲ ಬದುಕಿಗೆ ಗುರುವಿನ ಮಾರ್ಗದರ್ಶನ ಅವಶ್ಯಕ, ಆದರ್ಶಗಳನ್ನು ಬೋಧಿಸಿದ ಲಿಂ.ನೀಲಕಂಠ ಶ್ರೀಗಳ ನೆನಹು ನಮ್ಮೆಲ್ಲರ ಬಾಳಿಗೆ ಬೆಳಕು ತೋರುತ್ತಿವೆ ಎಂದರು. ನಿಡಗುಂದಿಯ ರುದ್ರಮುನಿ ಸ್ವಾಮೀಜಿ, ಮುಳವಾಡ ಹಿರೇಮಠದ ಸಿದ್ಧಲಿಂಗ ಸ್ವಾಮೀಜಿ ಮತ್ತಿತರರು ಉಪಸ್ಥಿತರಿದ್ದರು

# ’ಚಿಮಣಿ ಬೆಳಕಿನ ಬದುಕು’ ಕೃತಿ ಮುಖಪುಟ ಬಿಡುಗಡೆ

**ಉದಯರಶ್ಮಿ ನ್ಯೂಸ್**

ಸಿಂದಗಿ: ಅಲೆಮಾರಿ ಜನಾಂಗದವರು ಬದುಕು ಕಟ್ಟಿಕೊಳ್ಳಬೇಕು ಎನ್ನುವ ಹಿನ್ನಲೆಯಲ್ಲಿ ಅಲ್ಲಿಯ ಭಾಷೆ, ಭಾವನೆ, ಬದುಕು, ಬವಣೆಯನ್ನು ಚಿಮಣಿ ಬೆಳಕಿನ ಬದುಕು ಕೃತಿಯಲ್ಲಿ ಕಟ್ಟಿ ಕೊಡಲಾಗಿದೆ ಎಂದು ಹಿರಿಯ ಜಾನಪದ ವಿದ್ವಾಂಸ ಡಾ.ಎಂ.ಎಂ ಪಡಶೆಟ್ಟಿ ಹೇಳಿದರು.



ಪಟ್ಟಣದಲ್ಲಿ ‘ಚಿಮಣಿ ಬೆಳಕಿನ ಬದುಕು ಅನ್ನೋ ನಾಟಕ ಕೃತಿಯ ಮುಖಪುಟವನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಈಗಾಗಲೆ ಕಥೆ, ಕವಿತೆ ಬರೆಯುತ್ತಿರುವ ನಾಗೇಶ ತಳವಾರ, ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಚಿಮಣಿ ಬೆಳಕಿನ ಬದುಕು ಕೃತಿಯ ಮೂಲಕ ನಾಟಕಕಾರರಾಗಿ ಹೊರಹೊಮ್ಮಿದ್ದಾರೆ ಎಂದು ಹಿರಿಯ ಕಥೆಗಾರ ಡಾ.ಚನ್ನಪ್ಪ ಕಟ್ಟಿ ಹೇಳಿದರು.

ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಸಹಯೋಗದೊಂದಿಗೆ ಸಿಂದಗಿಯ ಮಾಧ್ಯಮರಂಗ ಫೌಂಡೇಶನ್, ಮೈಸೂರಿನ ಸ್ವಜನ್ಯ ಕಲಾ ವೇದಿಕೆ ಜಂಟಿಯಾಗಿ, ಫೆ.10ರಂದು ಪುಸ್ತಕ ಬಿಡುಗಡೆ ಕಾರ್ಯಕ್ರಮ ಆಯೋಜಿಸಿವೆ. ಚಾಮರಾಜನಗರ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಂ.ಆರ್ ಗಂಗಾಧರ್ ಪುಸ್ತಕ ಬಿಡುಗಡೆಗೊಳಿಸಲಿದ್ದಾರೆ. ಮೈಸೂರು ವಿಶ್ವವಿದ್ಯಾಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ವಿಜಯಲಕ್ಷ್ಮಿ ಕರಿಕಲ್ ‘ಚಿಮಣಿ ಬೆಳಕಿನ ಬದುಕು’ ಕೃತಿ ಕುರಿತು ಮಾತನಾಡಲಿದ್ದಾರೆ. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಅಧ್ಯಕ್ಷತೆ ವಹಿಸಿಕೊಳ್ಳುತ್ತಿದ್ದಾರೆ ಎಂದು ಮಾಧ್ಯಮರಂಗ ಪೌಂಡೇಶನ್ ಅಧ್ಯಕ್ಷ ನಾಗೇಶ ತಳವಾರ ಹೇಳಿದರು.

# ಶಿಕ್ಷಣದಿಂದಲೇ ಧರ್ಮದ ಏಳಿಗೆ ಸಾಧ್ಯ :ಬಿಜ್ಜರಗಿ

**ಉದಯರಶ್ಮಿ ನ್ಯೂಸ್**

ವಿಜಯಪುರ: ಹಾಲುಮತ ಧರ್ಮವು ಅತ್ಯಂತ ಶ್ರೇಷ್ಠವಾಗಿದ್ದು, ಈ ಧರ್ಮದ ಸಾರವನ್ನು ಎಲ್ಲರೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ವಿಜಯಪುರದ ಹಾಲುಮತ ವಿದ್ವಾಂಸ ಚಂದ್ರಕಾಂತ ಬಿಜ್ಜರಗಿ ಗುರೂಜಿ ಹೇಳಿದರು.

ತಾಳಿಕೋಟಿ ತಾಲೂಕಿನ ಬೂದಿಹಾಳ ಪಿಟಿ ಗ್ರಾಮಕ್ಕೆ ಭೇಟಿ ನೀಡಿದ ಅವರು, ಹಾಲುಮತದ ಪ್ರತಿಯೊಂದು ಮನೆಗೆ ಭೇಟಿ ನೀಡಿದ ಅವರು, ತಾವು ಬರೆದ ಹಾಲುಮತದ ಗ್ರಂಥ ಪ್ರತಿಯೊಬ್ಬರಿಗೂ ತಲುಪಿಸಿ, ಮದ್ಯ, ಮಾಂಸ, ಸೇವನೆ ಮಾಡಬಾರದು. ಒಳ್ಳೆಯ ಮನುಷ್ಯರಾಗಿ ಧರ್ಮದ ಮೂಲಸಾರದಂತೆ ಬದುಕಬೇಕು ಎಂದು ಹೇಳಿದರು.




ಹಾಲುಮತದ ಜನಾಂಗದವರು ತಮ್ಮ ಮಕ್ಕಳಿಗೆ ಶಿಕ್ಷಣವಂತರಾಗಿ ಮಾಡಲು ಶ್ರಮಿಸಬೇಕು. ಶಿಕ್ಷಣದಿಂದಲೇ ಧರ್ಮದ ಏಳಿಗೆ ಸಾಧ್ಯ ಎಂದು ಹೇಳಿದರು

ಈ ಸಂದರ್ಭದಲ್ಲಿ ಹಾಲುಮತದ ಮುಖಂಡರಾದ ಮಲ್ಲಿಕಾರ್ಜುನ್ ನಾಯ್ಕಲ್, ಗ್ರಾಮ ಪಂಚಾಯತಿ ಸದಸ್ಯರಾದ ಕುಮಾರ್ ಗೌಡ ಬಿರಾದಾರ್, ಮಲ್ಲಿಕಾರ್ಜುನ ಕುಳಗೇರಿ, ಹನುಮಂತರಾಯ ಮಡಿಕೇಶ್ವರ್, ದೇವಕಾಂತ್ ಬಿಜ್ಜರಗಿ, ಸತೀಶ್ ಅಡವಿ ಮುಂತಾದವರು ಉಪಸ್ಥಿತರಿದ್ದರು.

# ಕವಿಯಾಗುವ ಮುನ್ನ ಕಿವಿಯಾಗಬೇಕು :ಸಿದ್ಧಾಪುರ

**ಉದಯರಶ್ಮಿ ನ್ಯೂಸ್**

ವಿಜಯಪುರ: ಬೆಂದರೆ ಮಾತ್ರ ಬೇಂದ್ರೆ ಎಂದು ಹೇಳಿದ ಮಾತು ನೂರಕ್ಕೆ ನೂರು ಸತ್ಯವಾಗಿದ್ದು, ಕವಿಯಾಗುವ ಮುನ್ನ ಕೇಳುವ ಕಿವಿಯಾಗಬೇಕು. ಇನ್ನೊಬ್ಬರ ನೋವಿಗೆ ಧ್ವನಿಯಾಗಬೇಕು. ಬೇರೊಬ್ಬರ ಭಾವನೆಗಳನ್ನು ನಾವು ಅರಿತುಕೊಂಡಾಗ ಮಾತ್ರ ಸುಂದರವಾದ ಕವಿತೆಯನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕವಿ ಪ.ಗು.ಸಿದ್ಧಾಪುರ ಹೇಳಿದರು.




ನಗರದ ಬೆಂಗಳೂರು ಹೋಟೆಲ್ ಸಭಾಂಗಣದಲ್ಲಿ ಬೇಂದ್ರೆಯವರ ಜನ್ಮ ದಿನದ ಪ್ರಯುಕ್ತ ಆಯೋಜಿಸಲಾಗಿದ್ದ ಪಿಡಿಜೆ ಕಾಲೇಜಿನ ಕನ್ನಡ ಉಪನ್ಯಾಸಕ ಸಂತೋಷ ವಿ.ಕುಲಕರ್ಣಿ ವಿರಚಿತ ಮೂರು ಕೃತಿಗಳನ್ನು ಲೋಕಾರ್ಪಣೆ ಮಾಡಿ ಮಾತನಾಡಿದ ಅವರು, ಕನ್ನಡ ಭಾಷಾ ಶ್ರೀಮಂತಿಕೆಯನ್ನು ಹೆಚ್ಚು ಮಾಡಿದ ಸಾಹಿತ್ಯ ಇಂದು ಸೊರಗುತ್ತಿರುವುದು ಕಂಡು ಬರುತ್ತಿದೆ. ಆದರೂ ಅದರ ಮಧ್ಯದಲ್ಲಿ ಸಂತೋಷ ಕುಲಕರ್ಣಿಯಂತಹ ಕವಿಗಳು ಬರೆಯುವವರು ಇರುವ ವರೆಗೂ ಕೆಲವು ಜನವಾದರೂ ಆಸಕ್ತ ಓದುಗರು ಇದ್ದೇ ಇರುತ್ತಾರೆ. ಅವರ ಮನವನ್ನು ಮುಟ್ಟುವುದಕ್ಕಾಗಿಯಾದರೂ ನಾನು ಬರೆಯಬೇಕು ಎಂದು ಗಟ್ಟಿ ಧೈರ್ಯ ಮಾಡಿ ಮೂರು ಕೃತಿಗಳನ್ನು ಲೋಕಾರ್ಪಣೆ ಮಾಡಿದ್ದು ಸಾಹಿತ್ಯ ಉಪಾಸಕರ ಮನವನ್ನು ಗೆಲ್ಲುತ್ತವೆ ಎಂದು ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಹಾನಗರ ಪಾಲಿಕೆಯ ಸದಸ್ಯ ರಾಜಶೇಖರ ಕುರಿಯವರು, ನಾನು ಕಲಿತಿದ್ದು ಕಡಿಮೆಯಾದರೂ ನನ್ನಲ್ಲಿ ಜ್ಞಾನದ ಜ್ಯೋತಿಯನ್ನು ಬೆಳಗಿಸುವುದಕ್ಕೆ ಕಾರಣವಾಗಿದ್ದು ಕನ್ನಡದ ಪುಸ್ತಕಗಳು ಎಂದು ಹೇಳಿದರು.

ದರಬಾರ ಪದವಿ ಮಹಾವಿದ್ಯಾಲಯದ ಪ್ರಾಚಾರ್ಯ ಗಿರೀಶ ಮಣ್ಣೂರ, ಪಿಡಿಜೆ ಕಾಲೇಜಿನ ಪ್ರಾಚಾರ್ಯೆ ಡಿ.ಕೆ. ಕುಲಕರ್ಣಿ ಹಾಗೂ ತಳೆವಾಡ ಗ್ರಾಮ ಪಂಚಾಯ್ತಿ ಸದಸ್ಯ ಸಿದ್ದು ದೇಸಾಯಿ ಬಮರಡ್ಡಿ, ಸಂತೋಷ ವಿ ಕುಲಕರ್ಣಿ ಕಾರ್ಯಕ್ರಮವನ್ನುದ್ಧೇಶಿಸಿ ಮಾತನಾಡಿದರು.

ಸಾಹಿತಿ ಹಾಗೂ ಉಪನ್ಯಾಸಕ ಆರ್.ಎಸ್.ಪಟ್ಟಣಶೆಟ್ಟಿ, ಮುಸ್ತಾಕ ಮಲಘಾಣ, ಮಂಜುನಾಥ ಮ. ಜುನಗೊಂಡ, ಕ್ರಮವಾಗಿ ಸಂಸಾರ ಬಂಡಿ, ಜುಗಲ್‌ಬಂದಿ ಹಾಗೂ ಮಾತುಮತಿಸಿದ ಮಹಾಕವಿ ಕೃತಿಗಳನ್ನು ಪರಿಚಯಿಸಿದರು.

ತನು ಪೌಂಡೇಷನ್ ಅಧ್ಯಕ್ಷ ವಿಜುಗೌಡ ಕಾಳಶೆಟ್ಟಿ, ಮನು ಪತ್ತಾರ, ಭಾಗೇಶ ಮುರಡಿ, ಅವಿನಾಶ ಅಥ–’ಗ್ರ್, ವಿಷ್ಣು, ಶೇಖರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಗಾಯಕ ಪಾಂಡುರಂಗ ಕುಲಕರ್ಣಿ ಪ್ರಾರ್ಥಿಸಿದರು. ಹೆಚ್. ಜೆ.ದೇಸಾಯಿ ಸ್ವಾಗತಿಸಿದರು.

# ಸಮಾಜದಲ್ಲಿ ಶಿಕ್ಷಕ ವೃತ್ತಿ ಪವಿತ್ರವಾಗಿದೆ :ರಾಜನಾಳ




**ಉದಯರಶ್ಮಿ ನ್ಯೂಸ್**

ಬಸವನಬಾಗೇವಾಡಿ: ತಾಲೂಕಿನ ಹುಣಶ್ಯಾಳ ಪಿಬಿ ಗ್ರಾಮದ ಬಡಾವಣೆಯ ಸರಕಾರಿ ಹಿರಿಯ ಕನ್ನಡ ಗಂಡು ಮಕ್ಕಳ ಪ್ರಾಥಮಿಕ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ಶಿಕ್ಷಕಿ ಎ.ಎಂ.ಸಗರನಾಳ ಅವರು ಸೇವಾ ನಿವೃತ್ತಿ ಹೊಂದಿದ ಪ್ರಯುಕ್ತ ಬುಧವಾರ ಜರುಗಿದ ಕಾರ್ಯಕ್ರಮದಲ್ಲಿ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ರಾಜನಾಳ ಮಾತನಾಡಿ, ಸಮಾಜದಲ್ಲಿ ಶಿಕ್ಷಕ ವೃತ್ತಿ ಅತ್ಯಂತ ಪವಿತ್ರವಾದದ್ದು. ಇಂತಹ ವೃತ್ತಿಯಲ್ಲಿ ಪ್ರಾಮಾಣಿಕ ಸೇವೆ ಸಲ್ಲಿಸಿ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಿ ತಮ್ಮ ಸೇವೆಯನ್ನು ನಿಷ್ಠೆಯಿಂದ ಸೇವೆ ಸಲ್ಲಿಸಿ ಮಕ್ಕಳ ಬದುಕಿಗೆ ಎ.ಎಂ ಸಗರನಾಳ ಅವರು ಬೆಳಕು ಚೆಲ್ಲಿದ್ದಾರೆ. ಅವರ ಸೇವೆ ಮಾದರಿಯಾಗಿದೆ ಎಂದು ಹೇಳಿದರು.

ಎಚ್. ಬಿ.ಬಾರಿಕಾಯಿ ಮಾತನಾಡಿ, ಸೇವಾ ನಿವೃತ್ತಿ ಹೊಂದಿದ ಗುರುಮಾತೆ ಅಮರಾವತಿ ಸಗರನಾಳ ಅವರು 35 ವರ್ಷ ಈ ಶಾಲೆಯಲ್ಲಿ ಮಕ್ಕಳಿಗೆ ಶಿಕ್ಷಣ ನೀಡುವುದರೊಂದಿಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಮಕ್ಕಳು ಪಾಲ್ಗೊಳ್ಳಲು ಪ್ರೋತ್ಸಾಹಿಸಿ ಉತ್ತಮ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸನ್ಮಾನ ಸ್ವೀಕರಿಸಿದ ಸೇವಾ ನಿವೃತ್ತಿ ಹೊಂದಿದ ಎ.ಎಂ.ಸಗರನಾಳ ಮಾತನಾಡಿದರು.

ಶಿಕ್ಷಣ ಇಲಾಖೆಯ ತನಿಖಾಧಿಕಾರಿ ಈರಣ್ಣ ಜುಳು ಜುಳೆ, ಪ್ರವಚನಕಾರ ಗುಂಡಪ್ಪ ಶಾಸ್ತ್ರಿ ಆಲೂರು, ಪ್ರವಚನಕಾರ ಶಿವಪುತ್ರ ಹೆಬ್ಬಾಳ, ಶರಣಪ್ಪ ಮಾದರ, ಲಕ್ಷ್ಮಿ ಗಾಳೆಪ್ಪಗೊಳ, ಡಾ. ಬಸವರಾಜ ಹಡಪದ, ಎಂ.ಬಿ.ಪತ್ತಾರ, ಡಾ.ಅಮರೇಶ ಮಿಣಜಗಿ, ಶಾಲೆಯ ಎಸ್ ಡಿ ಎಮ್ ಸಿ ಅಧ್ಯಕ್ಷರು, ಪದಾಧಿಕಾ–ರಿಗಳು ಊರಿನ ಹಿರಿಯರು ಶಿಕ್ಷಣ ಪ್ರೇಮಿಗಳು ಶಾಲೆಯ ಮುಖ್ಯಗುರು ಮಾತೆಯರು, ಸಿಬ್ಬಂದಿ ವರ್ಗ ಮತ್ತು ಮಕ್ಕಳು ,ಪಾಲಕರು, ಪೋಷಕರು ಕಾರ್ಯಕ್ರಮದಲ್ಲಿ ಇದ್ದರು.

ಇದೇ ಸಂದರ್ಭದಲ್ಲಿ ಡಾ.ಬಸವರಾಜ ಹಡಪದ ಅವರನ್ನು ಸನ್ಮಾನಿಸಲಾಯಿತು.

# ಬಾಲಹನುಮಾನ ಜಾತ್ರಾ ಮಹೋತ್ಸವಕ್ಕೆ ಚಾಲನೆ

ಉದಯರಶ್ಮಿ ನ್ಯೂಸ್

ದೇವರಹಿಪ್ಪರಗಿ: ಶ್ರೀಬಾಲಹನುಮಾನ 10ನೇ ವರ್ಷದ ಜಾತ್ರಾ ಮಹೋತ್ಸವದ ಅಂಗವಾಗಿ ಜರುಗಿದ ಸಂಗ್ರಾಣಿ ಕಲ್ಲು ಹಾಗೂ ಭಾರ ಎತ್ತುವ ಸ್ಪರ್ಧೆಗೆ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು.

ಪಟ್ಟಣದ ಗಂಗಾನಗರದ ಶ್ರೀಬಾಲ ಹನುಮಾನನ 10ನೇ ವರ್ಷದ ಜಾತ್ರೆಗೆ ಗುರುವಾರ ಅಧಿಕೃತವಾಗಿ ಚಾಲನೆ ನೀಡಲಾಗಿದೆ. ಜಾತ್ರೆಯ ಅಂಗವಾಗಿ ಪ್ರತಿ ವರ್ಷದಂತೆ ಈ ಬಾರಿಯು ದಿ.07 ಬುಧವಾರ ದವರೆಗೆ ಪುರಾಣ, ವಿವಿಧ ಸ್ಪರ್ಧೆ ಹಾಗೂ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಅಂತೆಯೇ ಶುಕ್ರವಾರ ದೇವಸ್ಥಾನದ ಆವರಣದಲ್ಲಿ ಸಂಗ್ರಾಣಿ, ಗುಂಡು ಕಲ್ಲು ಸೇರಿದಂತೆ ಭಾರವಾದ ಚೀಲಗಳನ್ನು ಎತ್ತುವ ಸ್ಪರ್ಧೆಗೆ ಪೂಜೆ ಸಲ್ಲಿಸಿ ಚಾಲನೆ ನೀಡಲಾಯಿತು.

5 ಕಿಲೋದಿಂದ ಆರಂಭಿಸಿ 70 ಕಿಲೋದವರೆಗೆ ಸಂಗ್ರಾಣಿ ಕಲ್ಲು ಹಾಗೂ 170 ಕಿಲೋದವರೆಗೆ ಗುಂಡು ಕಲ್ಲುಗಳನ್ನು ಎತ್ತುವ ಸ್ಪರ್ಧೆಯಲ್ಲಿ ಪಟ್ಟಣ, ಮುಳಸಾವಳಗಿ ಸೇರಿದಂತೆ ವಿವಿಧ ಗ್ರಾಮಗಳ ಸ್ಪರ್ಧಿಗಳು ಪಾಲ್ಗೊಂಡಿದ್ದರು.




ಜಾತ್ರಾ ಸಮೀತಿಯ ಅಧ್ಯಕ್ಷ ನಿಂಗು ಯಂಭತ್ನಾಳ, ಪಟ್ಟಣ ಪಂಚಾಯಿತಿ ಸದಸ್ಯ ಕಾಸುಗೌಡ ಬಿರಾದಾರ (ಜಲಕತ್ತಿ), ಪಿಕೆಪಿಎಸ್ ಅಧ್ಯಕ್ಷ ಶ್ರೀಶೈಲ ದೇಸಾಯಿ, ಬಂಡೆಪ್ಪ ಬಿರಾದಾರ (ದಿಂಡವಾರ), ಭೀಮು ಒಂಟೆತ್ತೀನ, ಸೋಮು ದೇವೂರ, ಭೀರಪ್ಪ ನಾಗಠಾಣ, ಶ್ರೀಕಾಂತ ನಾಯಿಕ(ಕುಂಟೋಜಿ), ರಮೇಶ ಮುಳಸಾವಳಗಿ ಸೇರಿದಂತೆ ಜಾತ್ರಾ ಸಮೀತಿಯ ಪದಾಧಿಕಾರಿಗಳು ಇದ್ದರು.

## ದೈಹಿಕ ಶಿಕ್ಷಣ ಹಾಗೂ ಚಿತ್ರಕಲಾ ಶಿಕ್ಷಣ ಶಿಕ್ಷಕರ ಪುನಶ್ಚೇತನ ಕಾರ್ಯಾಗಾರ

# ಚಿತ್ರಕಲೆ & ದೈಹಿಕ ಶಿಕ್ಷಣ ಶೈಕ್ಷಣಿಕ ರಂಗದ ಆಧಾರಸ್ತಂಭಗಳು

ಉದಯರಶ್ಮಿ ನ್ಯೂಸ್

ಕೊಲ್ಹಾರ: ಚಿತ್ರಕಲೆ ಹಾಗೂ ದೈಹಿಕ ಶಿಕ್ಷಣ ಶೈಕ್ಷಣಿಕ ರಂಗದ ಆಧಾರಸ್ತಂಭವಾಗಿದ್ದು ಇವೆರಡು ವಿಷಯಗಳು ಮಕ್ಕಳು ಜ್ಞಾನಾರ್ಜನೆ ಪಡೆಯುವ ಸಮಯದಲ್ಲಿ ಮಹತ್ವದ ಸ್ಥಾನ ಹೊಂದಿವೆ ಎಂದು ಬಸವನ ಬಾಗೇವಾಡಿ ಕ್ಷೇತಶಿಕ್ಷಣಾಧಿಕಾರಿ ವಸಂತ ರಾಠೋಡ ಅಭಿಪ್ರಾಯ ವ್ಯಕ್ತಪಡಿಸಿದರು.



ಪಟ್ಟಣದ ಸಿಕ್ಯಾಬ್ ಸಂಯುಕ್ತ ಪ.ಪೂ.ಕಾಲೇಜು ಪ್ರೌಢಶಾಲಾ ವಿಭಾಗ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಬ.ಬಾಗೇವಾಡಿ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಬ.ಬಾಗೇವಾಡಿ, ನಿಡಗುಂದಿ, ಕೊಲ್ಹಾರ ತಾಲೂಕಿನ ಪ್ರೌಢಶಾಲಾ ದೈಹಿಕ ಶಿಕ್ಷಣ ಹಾಗೂ ಚಿತ್ರಕಲಾ ಶಿಕ್ಷಣ ಶಿಕ್ಷಕರ ಪುನಶ್ಚೇತನದ ಒಂದು ದಿನದ ತಾಲೂಕು ಮಟ್ಟದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮಕ್ಕಳಿಗೆ ಆಟೋಟಗಳ ಜೊತೆ ಶಿಸ್ತು ಬದ್ಧ ನಿಯಮಗಳ ಜ್ಞಾನದೊಂದಿಗೆ ಸದೃಢ ಆರೋಗ್ಯ ಭಾಗ್ಯ ಕಲ್ಪಿಸುವ ದಿವ್ಯ ಶಕ್ತಿ ದೈಹಿಕ ಶಿಕ್ಷಣ ಹೊಂದಿದ್ದರೆ, ಚಿತ್ರಕಲೆ ಕಲಿಕಾ ಹಿತಭಾವವನ್ನು ಉತ್ಸಾಹದ ಚಿಲುಮೆಯೊಂದಿಗೆ ಅದಮ್ಯಗೊಳಿಸುತ್ತದೆ. ಪಠ್ಯಾಧಾರಿತ ವಿಷಯಗಳೊಂದಿಗೆ ಇವೆರಡು ವಿಷಯುಗಳು ಅನನ್ಯ ನಂಟು ಇರಿಸಿಕೊಂಡಿದ್ದು ಶಿಕ್ಷಕರು ಮಕ್ಕಳಿಗೆ ಈ ವಿಶೇಷ ವಿಷಯಗಳ ಜ್ಞಾನಾಮೃತ ನೀಡಿ ಪ್ರೋತ್ಸಾಹಿಸಬೇಕೆಂದರು.

ಎಸ್ಸೆಸ್ಸೆಲ್ಸಿ ಪರೀಕ್ಷಾ ಹಿನ್ನೆಲೆಯಲ್ಲಿ ಮಕ್ಕಳಲ್ಲಿ ಪಠ್ಯವಸ್ತುಗಳ ಸರಳೀಕೃತ ರೂಪದಲ್ಲಿ ಚಿತ್ರ ರಚನಾ ಕೌಶಲ್ಯ ಮೂಡಿಸಿ, ಪರೀಕ್ಷಾ ದೃಷ್ಟಿಯಿಂದ ಆದ್ಯತೆ ನೀಡಿ ಮಕ್ಕಳಿಗೆ ಚಿತ್ರ ರಚನೆಯಲ್ಲಿ ತೊಡಗಿಸಿಕೊಳ್ಳಲು ತಾಲೂಕಿನ ಎಸ್ಸೆಸ್ಸೆಲ್ಸಿ ಫಲಿತಾಂಶ ಬದಲಾವಣೆಗೆ ಸಂಕಲ್ಪ ಮಾಡಿ ಪಠ್ಯಾಧಾರಿತ ವಿಷಯುದಡೆಗೆ ದೃಷ್ಟಿಕೋನ ಬೀರಿ ಸಹಕಾರ ನೀಡಿ ಆ ದಿಸೆಯಲ್ಲಿ ಕಾರ್ಯಾಗಾರದ ಸದ್ವಿನಿಯೋಗವಾಗಲಿ ಎಂದು ಆಶಿಸಿದರು.

ರಾಜ್ಯ ಚಿತ್ರಕಲಾ ಶಿಕ್ಷಕರ ಒಕ್ಕೂಟ ಸಂಘದ ರಾಜ್ಯಾಧ್ಯಕ್ಷ ಗಂಗಾಧರ ಪಾಟೀಲ, ದೈಹಿಕ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಬಿ.ಎಂ.ಪಾಟೀಲ, ತಾಲೂಕಾ ದೈಹಿಕ ಶಿಕ್ಷಣಾಧಿಕಾರಿ ಎಸ್.ಎಸ್.ಅವಟಿ, ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಸಿ.ಎಸ್.ಹಿರೇಮಠ, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಎಸ್.ಎಂ.ಮಣೂರ ವಹಿಸಿದ್ದರು.

ಚಿತ್ರಕಲೆ ಸಂಪನ್ಮೂಲ ವ್ಯಕ್ತಿ ಎಚ್.ಸಿ.ಹೂಗಾರ ಹಾಗೂ ಮೂರು ತಾಲೂಕಿನ ಶಿಕ್ಷಕ ಬಳಗದವರು ಪಾಲ್ಗೊಂಡಿದ್ದರು. ಸಾಕ್ಷಿಯಾ ತಾಂಬೋಳಿ ಕುರಾನ್ ಪಠಣ, ಆಸ್ಮಾ ಲಾಹೋರಿ ನಾಥ್ ,ಮರಿಯಲ ಸಂಗಡಿಗರು ಸ್ವಾಗತ ಗೀತೆ, ಹಮ್ದ ಪ್ರಾರ್ಥನಾ ಗೀತೆ ನಡೆಸಿಕೊಟ್ಟರು. ಬಿ.ಆರ್. ಮುದ್ದೇಬಿಹಾಳ ಸ್ವಾಗತಿಸಿದರು. ಶಿಕ್ಷಕ ಸದ್ದಾಂ ಹುಸೇನ್ ಹೊನ್ನಾಳ ನಿರೂಪಿಸಿ ವಂದಿಸಿದರು.

# ಇಂಡಿ: ವೀರ ಯೋಧನಿಗೆ ಹೃದಯ ಸ್ಪರ್ಶಿ ಸನ್ಮಾನ

ಉದಯರಶ್ಮಿ ನ್ಯೂಸ್

ಇಂಡಿ: ತಾಲೂಕಿನ ಲಚ್ಯಾಣ ಗ್ರಾಮದ ಮಹಾಂತೇಶ ರಾಮಚಂದ್ರಗೌಡ ಬಿರಾದಾರ ಇವರು ಸುಮಾರು 22 ವರ್ಷಗಳ ಕಾಲ ಭಾರತಾಂಬೆಯ ಸುದೀರ್ಘ ಸೇವೆ ಸಲ್ಲಿಸಿ ಸೇವಾನಿವೃತ್ತಿಯಾಗಿ ಲಚ್ಯಾಣ ಗ್ರಾಮಕ್ಕೆ ಮರಳಿದ ಅವರಿಗೆ ಗ್ರಾಮಸ್ಥರಿಂದ ಭವ್ಯ ಸ್ವಾಗತ ದೊರೆಯಿತು.



ಭಾರತಿಯ ಸೈನ್ಯದಲ್ಲಿ 2002 ರಲ್ಲಿ ಕೋರ್ ಇ ಎಮ್ ಇ ಸೇವೆಯನ್ನು ಪ್ರಾರಂಭಿಸಿ ದೇಶದ ಗಡಿಬಾಗಗಳಾದ ಜಮ್ಮು ಕಾಶ್ಮೀರದ ಪೂಂಚ್, ಓಡಿಸಾ,ಮಥುರಾ, ಅಂಡಮಾನ್ ನಿಕೋಬಾರ್, ಆಸಾಂ, ಹೀಗೆ ನಾನಾ ಭಾಗಗಳಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿ ಸೇವಾ ನಿವೃತ್ತಿಯಾದ ಅವರನ್ನು ಗ್ರಾಮದ ಶ್ರೀ ಸಿದ್ದಲಿಂಗ ಮಹಾರಾಜರ ಗೆಳೆಯರ ಬಳಗ ಆತ್ಮೀಯವಾಗಿ ಬರಮಾಡಿಕೊಂಡು ಊರಿನ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆ ಮಾಡಿದರು.

ನಂತರ ಶ್ರೀ ಸಿದ್ದಲಿಂಗ ಮಹಾರಾಜರ ಮಠದ ಆವರಣದಲ್ಲಿ ನಡೆದ ಕಾರ್ಯಕ್ರಮದ ಸಾನಿಧ್ಯವನ್ನು ಅಭಿನವ ಮುರುಘರಾಜೇಂದ್ರ ಸ್ವಾಮೀಜಿ ಹೀರೆಮಠ ಶಾರಶ್ಯಾಡ ಮತ್ತು ಇಂಡಿ ಓಂಕಾರ ಮಠದ ಡಾ. ಸ್ವರೂಪಾನಂದ ಸ್ವಾಮೀಜಿ ವಹಿಸಿದ್ದರು.

ಬಿಟ ಆಫೀಸರ್ ಡಿ ಎ ಮುಜಗೌಂಡ ಹೊರ್ತಿ ಮಾತನಾಡಿ, ರಾಜ್ಯದಲ್ಲಿಯೇ ಲಚ್ಯಾಣ ಗ್ರಾಮ ಜಿಲ್ಲೆಯಲ್ಲಿ ಅತಿ ಹೆಚ್ಚು ಸೈನಿಕರನ್ನು ಭಾರತ ಮಾತೆಯ ಸೇವೆಗೆ ಕಳುಹಿಸುವ ಹೆಗ್ಗಳಿಕೆಗೆ ಪಾತ್ರವಾಗಿದೆ ಎಂದರು.

ಕಾರ್ಯಕ್ರಮಕ್ಕೆ ಶಾಸಕರ ಚಿರಂಜೀವಿ ವಿಠ್ಠಲಗೌಡ ಪಾಟೀಲ್ ಚಾಲನೆ ನೀಡಿದರು. ಸಿದ್ದಲಿಂಗ ಮಹಾರಾಜರ ಮತ್ತು ಸಂಗನಬಸವ ಶಿವಯೋಗಿಗಳ ಭಾವ ಚಿತ್ರಕ್ಕೆ ಬಿಜೆಪಿ ಮುಖಂಡ ಅನಿಲಗೌಡ ಬಿರಾದಾರ ನೆರವೇರಿಸಿದರು.

# ಜಿಲ್ಲಾಧ್ಯಕ್ಷರಾಗಿ ದೇವಿಂದ್ರಪ್ಪಗೌಡ ಪೊಲೀಸಪಾಟೀಲ

ಉದಯರಶ್ಮಿ ನ್ಯೂಸ್



ಕೆಂಭಾವಿ: ರೈತ ಸಂಘದ ಹೋರಾಟಗಾರ ಮತ್ತು ಮಾಹಿತಿ ಹಕ್ಕು ಕಾರ್ಯಕರ್ತ ದೇವಿಂದ್ರಪ್ಪ ಗೌಡ.ವಿ.ಪೊಲೀಸ ಪಾಟೀಲ ಮಾಲಗತ್ತಿ ಇವರನ್ನು ಯಾದಗಿರಿ ಜಿಲ್ಲಾಧ್ಯಕ್ಷರಾಗಿ ಹಾಗೂ ಜಿಲ್ಲಾ ಗೌರವ ಅಧ್ಯಕ್ಷರಾಗಿ ಬಸವರಾಜಪ್ಪ ಗೌಡ. ಜಿ. ಮಾಲಿ ಪಾಟೀಲ ಹೆಮ್ಮಡಗಿ ಇವರನ್ನು ಆಯ್ಕೆ ಮಾಡಿ ವೇದಿಕೆ ರಾಜ್ಯಾಧ್ಯಕ್ಷ ವಿ. ಹನುಮಂತರಾಯಪ್ಪ ಆದೇಶ ಹೊರಡಿಸಿದ್ದಾರೆ.

ವೇದಿಕೆಯ ನೀತಿ ನಿಯಮಗಳ ಅಡಿಯಲ್ಲಿ ಅಸಹಾಯಕರು, ಅಶಕ್ತರು, ರೈತರ ಸಾರ್ವಜನಿಕರ ಕೆಲಸ ಮಾಡುವುದು ಹಾಗೂ ವೇದಿಕೆ ಮೂಲ ಉದ್ದೇಶಗಳ ಹಿತ ಕಾಪಾಡುವುದು, ಮುಂದಿನ ದಿನಗಳಲ್ಲಿ ಯಾದಗಿರಿ ಜಿಲ್ಲೆಯಾದ್ಯಂತ ಪದಾಧಿಕಾರಿಗಳನ್ನು ಆಯ್ಕೆ ಮಾಡಿಕೊಂಡು ಸಂಘಟನೆಗೆ ಒತ್ತು ನೀಡಲು ಆದೇಶ ನೀಡಲಾಗಿದೆ ಎಂದು ರಾಜ್ಯಾಧ್ಯಕ್ಷ ವಿ. ಹನುಮಂತರಾಯಪ್ಪ ತಿಳಿಸಿದ್ದಾರೆ.

## ಕಾವ್ಯರಶ್ಮಿ

– ರಶ್ಮಿ ಪ್ರಸಾದ್

("ನಮ್ಮ ಕಥಾ ಅರಮನೆ" ಬರಹಗಾರರು)



### ನೆರಳು..!

ಹುಟ್ಟಿನೊಂದಿಗೆ ಜೊತೆಯಾಗಿ
ಎಡಬಿಡದೆ ಒಡನಿರುವೆ
ಬದುಕೆಲ್ಲ ಹಿಂಬಾಲಿಸುತ
ನನ್ನೊಂದಿಗೆ ಮಣ್ಣಾಗುವೆ.!

ನೋವಲ್ಲು ನಲಿವಲ್ಲು ಸದಾ
ಜೊತೆಯಿರುವ ಪಯಣಿಗ.
ಜಗವೆಲ್ಲ ಕೈಬಿಟ್ಟರೂ ದೂರಾಗದ
ಏಕೈಕ ಸಂಗಡಿಗ.!

ಅಡಿಗಡಿಗು ಹೆಜ್ಜೆಹಾಕಿ
ಹೋಗಲಾಡಿಸುವೆ ಭೀತಿ.
ಉಸಿರುಸಿರಿಗೂ ಒಡನಾಡಿಯಾಗಿ
ತುಂಬುವೆ ಪ್ರೀತಿ.!

ನನಗೆ ನೆರಳೆಂದರೆ ಅಲ್ಲ
ಬರೀ ಬೆಳಕಿನ ಮಾಯೆ
ಪ್ರತಿಕ್ಷಣ ಬದುಕಿಗೆ ಭರವಸೆಯ
ಭಗವಂತನ ಛಾಯೆ.!



# ಮರೆವು ಎನ್ನುವುದೊಂದು ವರ

## ಭಾವರಶ್ಮಿ



– ಚೇತನ ಭಾರ್ಗವ

("ನಮ್ಮ ಕಥಾ ಅರಮನೆ" ಬರಹಗಾರರು)

ಉದಯರಶ್ಮಿ ದಿನಪತ್ರಿಕೆ

"ಮರೆವು ವರವೇ ಅಥವಾ ಶಾಪವೇ " ಇಂತಹ ಒಂದು ಜಿಜ್ಞಾಸೆ ಬಹಳ ಕಾಲದಿಂದ ಮನುಕುಲವನ್ನು ಕಾಡಿದೆ . ಪ್ರಾಣಿಗಳಲ್ಲೇ ವಿಕಸಿತ ಮೆದುಳನ್ನು ಹೊಂದಿರುವ ಮಾನವನಿಗೆ ಇಂದ್ರಿಯಗಳಿಂದ ವಿಚಾರಗಳನ್ನು ಅರಿಯುವ ವಿಶ್ಲೇಷಿಸುವ ಹಾಗೂ ಕಾಲಕ್ಕೆ ತಕ್ಕಂತೆ ಅದನ್ನು ನೆನಪಿಸಿಕೊಂಡು ಅಗತ್ಯಕ್ಕೆ ಬಳಸುವ ಸಾಮರ್ಥ್ಯ ಇತರ ಪ್ರಾಣಿಗಳಿಗಿಂತ ಮೀರಿದುದಾಗಿದೆ . ಹಲವು ಪ್ರಾಣಿಗಳ ಇಂದ್ರಿಯ ಸಾಮರ್ಥ್ಯವು ಮಾನವನಿಗಿಂತ ಹೆಚ್ಚಿದ್ದರೂ ( ಉದಾ: ದೂರದ ನೋಟ, ವಾಸನೆಗಳನ್ನು ಗ್ರಹಿಸುವಿಕೆ ಇತ್ಯಾದಿ ) ಮಾನವನ ಮೆದುಳು ನರಮಂಡಲ ವಿಕಸಿತಗೊಂಡಂತೆ ತನ್ನ ಇಂದ್ರಿಯಗಳು ಗ್ರಹಿಸುವ ವಿಚಾರಗಳನ್ನು ಸೂಕ್ತವಾಗಿ ವಿಶ್ಲೇಷಿಸಿ ಸಂಗ್ರಹಿಸುವ ಹಾಗೂ ತನ್ನ ಅಸ್ತಿತ್ವಕ್ಕೆ ಬಳಸಿಕೊಳ್ಳುವ ಕಲೆ ಮಾನವರಿಗೆ ಸಿದ್ಧಿಸಿದ್ದೇ. ಆತ ಭೂಮಂಡಲದ ಬುದ್ಧಿಶಾಲಿ ಪ್ರಭೇಧವಾಗಿ ಗುರುತಿಸಿಕೊಂಡಿದ್ದಾನೆ . ಅದರ ಮೂಲಕ ಅಭಿವೃದ್ಧಿಯನ್ನು ಸಾಧಿಸಿದ್ದಾನೆ , ಹಲವು ವಿಕ್ರಮಗಳನ್ನು ಮೆರೆದಿದ್ದಾನೆ.

ಮಾನವನ ನೆನಪಿನ ಶಕ್ತಿ ಸೂಕ್ತ ಸಮಯಕ್ಕೆ ಸಂಗ್ರಹವಾದ ವಿಷಯವನ್ನು ಹೊರತೆಗೆಯುವ ಪ್ರಕ್ರಿಯೆ ಮಾನವ ಪ್ರಭೇದವನ್ನು ಉಳಿಸಿಕೊಂಡು ಬಂತು. ಕ್ರೂರ ಪ್ರಾಣಿಗಳಿಂದ ಅಪಾಯವಿದೆ ಎಂಬ ವಿಚಾರದ ನೆನಪು ಮತ್ತೊಮ್ಮೆ ಅದನ್ನು ಕಂಡಾಕ್ಷಣ ತಾನು ಓಡಬೇಕು ಎಂದು ಪ್ರೇರೇಪಿಸಿತು. ಯಾವ ವಸ್ತುಗಳು ತನಗೆ ಅಪಾಯ ತರುತ್ತದೆ ಹಾಗೂ ಯಾವ ವಸ್ತು ತನಗೆ ಉಪಯೋಗ ಎಂಬ ಮಾನವ ಸಂಘ ಜೀವಿಯಾಗಿ ಕೃಷಿ ಮಾಡಲು ಹಾಗೂ ನಾಗರೀಕತೆಯನ್ನು ಬೆಳೆಸಲು ಸಹಾಯವಾಯಿತು . ಆತನ ವಿಚಾರ ಸಂಗ್ರಹಣಾ ವಿಧಾನ ಹಾಗೂ ಅದನ್ನು ಜ್ಞಾಪಕ ಮಾಡಿ ಬಳಸುವ ಕಲೆಯೇ ಆತನನ್ನು ಇತರೆಲ್ಲ ವರ್ಗದ ಜೀವಿಗಳಿಗಿಂತ ಬೇರೆಯೇ ಆಗಿ ನಿಲ್ಲಿಸಿತು .

ಇದಿಷ್ಟು ಮಾನವರ ವಿಚಾರಗಳ ಜ್ಞಾಪಕಶಕ್ತಿಯ ಪರಿಚಯವಾಯಿತು. ಅಸಲಿಗೆ ಮಾನವನ ಮೆದುಳು ಒಟ್ಟಿಗೆ ಹಲವಾರು ವಿಷಯಗಳನ್ನು ಸಂಗ್ರಹಿಸುವ ಮತ್ತು ಬೇಕಾದಾಗ ಮರುಪೂರೈಸುವ ಸಾಮರ್ಥ್ಯ ಹೊಂದಿದೆ . ಇದನ್ನು ಅವಧಾನ ಮುಂತಾದ ಕಲೆಗಳಲ್ಲಿ ಕಾಣಬಹುದು . ಒಬ್ಬ ವ್ಯಕ್ತಿ ಒಟ್ಟಿಗೆ ನೂರು ಜನರು ಕೇಳುವ ಪ್ರಶ್ನೆಗಳಿಗೆ ನೆನಪಿಟ್ಟು ಹಲವಾರು ಪ್ರಕಾರಗಳಲ್ಲಿ ಉತ್ತರ ಹೇಳುತ್ತಾನೆ . ಕಂಪ್ಯೂಟರ್ ಗೆ ಹೋಲಿಸಿದರೆ ಮಾನವನ ಮೆದುಳಿನ ಸಾಮರ್ಥ್ಯ ಹಲವು ಪಟ್ಟು ಹಿರಿದಾದುದು . ಹಲವಾರು ಮಕ್ಕಳಲ್ಲಿ ಜ್ಞಾಪಕ ಶಕ್ತಿ ಅತ್ಯದ್ಭುತವಾಗಿರುವುದನ್ನು ನೋಡಿರಬಹುದು . ಅವರಲ್ಲಿ ಜಗತ್ತಿನ ಎಲ್ಲಾ ವಿಚಾರಗಳ ಬಗ್ಗೆಯೂ ವಿಷಯ ಗೊತ್ತಿದ್ದೂ ಅದನ್ನು ಜ್ಞಾಪಿಸಿಕೊಂಡು ಹೇಳಬಲ್ಲವರಾಗಿರುತ್ತಾರೆ .

ಹೀಗೆ ವಿಚಾರಗಳ ಸಂಗ್ರಹ ಒಂದೆಡೆಯಾದರೆ ಅದರ ಮರುಪೂರಣ ವ್ಯವಸ್ಥೆ ಜ್ಞಾಪಕ ಶಕ್ತಿ . ಇದು ವ್ಯಕ್ತಿಗಳಲ್ಲಿ ಒಂದೊಂದು ಮಟ್ಟಕ್ಕಿರುತ್ತದೆ . ಕೆಲವರು ಒಂದು ಬಾರಿ ಕೇಳಿದ ಅಥವಾ ನೋಡಿದ ವಿಷಯಗಳನ್ನು ವರ್ಷವಾದಮೇಲೂ ಅದೇ ತೆರನಾಗಿಯೇ ಹೇಳಬಲ್ಲರು . ಅವರ ಜ್ಞಾಪಕ ಶಕ್ತಿ ಉಚ್ಚ ಮಟ್ಟದ್ದಾಗಿರುತ್ತದೆ . ಇನ್ನು ಕೆಲವರು ನಿರಂತರ ಹಾಗೂ ವ್ಯವಸ್ಥಿತ ಕಲಿಕೆಯಿಂದ ಜ್ಞಾಪಕ ಶಕ್ತಿಯನ್ನು ಪಡೆಯುತ್ತಾರೆ . ಒಮ್ಮೆ ಕಲಿತ ಸೈಕಲ್ ಅಥವಾ ಈಜಿನ ಹಾಗೆ. ದೇಹಕ್ಕೆ ಅದು ಒಗ್ಗಿ ಯಾವಾಗ ಬೇಕಾದರೂ ಅದು ಜ್ಞಾಪಿಸಿಕೊಳ್ಳಬಲ್ಲದು .

ಆದರೆ ಪ್ರಕೃತಿಯ ವೈಚಿತ್ರ ಅಥವಾ ರಹಸ್ಯವೆಂದರೆ ವಿಚಾರಗಳ ಮರುಪೂರಣ ವ್ಯವಸ್ಥೆ ಕೆಲವರಲ್ಲಿ ಅವ್ಯವಸ್ಥೆಯಿಂದ ಕೂಡಿರುತ್ತದೆ . ಇದನ್ನು ಮರೆವು ಎನ್ನುತ್ತಾರೆ . ಅವರ ಜ್ಞಾಪಕ ಶಕ್ತಿ ಸರಾಸರಿ ಮಟ್ಟಕ್ಕಿಂತ ತುಸು ಕಡಿಮೆ ಇರುತ್ತದೆ. ಕೆಲವರಲ್ಲಿ ಮರೆವು ರೋಗವೇ ಆಗಿರುತ್ತದೆ .

ದೈನಂದಿನ ಹಲವಾರು ವಿಚಾರಗಳಲ್ಲಿ ಮರೆವು ಶಾಪವೇ . ಇದನ್ನು ಎಲ್ಲರೂ ಅನುಭವಿಸಿಯೇ ಇರುತ್ತಾರೆ . ಚೆನ್ನಾಗಿ ಓದಿದ ವಿಚಾರಗಳು ಪರೀಕ್ಷೆಯಲ್ಲಿ ನೆನಪಿಗೆ ಬರದೇ ಮರೆವು ಉಂಟಾಗಿ ನಪಾಸಾಗಿರುತ್ತೇವೆ . ಮನೆಗೆ ಮುಖ್ಯವಾದ ವಸ್ತುಗಳನ್ನು ಕೊಳ್ಳುವಲ್ಲಿ , ನಮ್ಮ ಬೆಲೆಬಾಳುವ ವಸ್ತುಗಳನ್ನು ಎಲ್ಲೆಂದರಲ್ಲಿ ಬಿಟ್ಟು ಕಳೆದುಕೊಳ್ಳುವಲ್ಲಿ . ಹತ್ತಿರದವರೇ ಆದ ಹಲವರ ಹೆಸರೇ ಮರೆಯುವಲ್ಲಿ , ಮುಖ್ಯವಾದ ದಿನಾಂಕಗಳು , ಬಾಸ್ ಹೇಳಿದ ಕೆಲಸ , ಪ್ರೀತಿ ಪಾತ್ರರಿಗೆ ಒಯ್ಯಬೇಕಾದ ತಿನಿಸು , ಅದಲ್ಲದೆ ಆಪರೇಷನ್ ಮಾಡಿ ಕತ್ತರಿಯನ್ನು ರೋಗಿಯ ಹೊಟ್ಟೆಯೊಳಗೆ ಮರೆತು ಸೃಷ್ಟಿಯಾದ ಅವಘಡಗಳಿಗೆ ಲೆಕ್ಕವೇ ಇಲ್ಲ . ಒಟ್ಟಿಗೆ ಮರೆವು ಹಲವಾರು ಸಮಸ್ಯೆಗಳನ್ನು ತಂದಿಡುತ್ತದೆ . ಶಾಪವಾಗಿ ಕಾಡುತ್ತದೆ . ಆಗ ನಮ್ಮ ಅವಸ್ಥೆ ಯಾವುದೇ ಅಲ್ಜೀಮರ್ ರೋಗದಿಂದ ಬಳಲುವ ವ್ಯಕ್ತಿಗಿಂತಲೂ ಕಡಿಮೆ ಇರುವುದಿಲ್ಲ .

ಆದರೆ ಇದು ಮರೆವಿನ ಬಗ್ಗೆ ನಮ್ಮ ದಿನನಿತ್ಯದ ಅಗತ್ಯಗಳ ದೃಷ್ಟಿಯಿಂದ ನೋಡಿದ ಬರಿಯ ಪಾರ್ಶ್ವ ನೋಟವಷ್ಟೇ. ಆದರೆ ಸೂಕ್ಷ್ಮವಾಗಿ ಅವಲೋಕಿಸಿದರೆ ಮರೆವಿನ ಮೂಲಕ ಪ್ರಕೃತಿಯು ನಮ್ಮ ಮೇಲೆ ಎಸಗಿರುವ ಉಪಕಾರವೂ ಹಲವು . ಸಮಯವು ನಿಧಾನವಾಗಿ ಎಲ್ಲವನ್ನೂ ಮರೆಯುವಂತೆ ಮಾಡುತ್ತದೆ . ಪ್ರೀತಿ ಪಾತ್ರರ ಸಾವು ದಿನಗಳ ಕಾಲ ಕಾಡಿದರೂ ಕ್ರಮೇಣ ಅದರ ಗಾಯ ಮಾಯುತ್ತದೆ . ಅವರ ಅಗಲಿಕೆಯ ನೆನಪು ಮಾಸುತ್ತದೆ . ನಮ್ಮ ದೇಹವು ತಲ ತಲಾಂತರದ ನಮ್ಮ ಹಿರಿಯರ ಬಳುವಳಿ . ನಮ್ಮ ಮುಖದ ಹೋಲಿಕೆ ಪ್ರಾಯಶಃ ನಮ್ಮ ಮುತ್ತಾತನದ್ದಾಗಿರಬಹುದು . ನಮ್ಮ ಚೂಪು ಮೂಗು ಮೂರು ತಲೆಮಾರಿನ ಹಿಂದಿನ ನಮ್ಮ ಅಜ್ಜಿಯದ್ದಾಗಿರಬಹುದು . ದೇಹಕ್ಕೆ ನೆನಪು ಜ್ಞಾಪಕ ಪ್ರಕೃತಿಯೇ ನೀಡಿದೆ . ಆದರೆ ಜಾಣ್ಮೆಯಾಗಿ ಮನಸ್ಸಿನಲ್ಲಿ ವ್ಯಕ್ತಿಗತ ನೆನಪುಗಳನ್ನು ಮಾತ್ರ ಇಟ್ಟಿದೆ . ನಮ್ಮ ಬುದ್ಧಿಗೆ ಮೂರು ತಲೆಮಾರಿನ ಹಿಂದಿನ ಘಟನೆಗಳು ದಾಖಲಾಗಿ ನೆನಪು ಬರುವುದಿಲ್ಲ . ಪ್ರಕೃತಿಯು ಅದನ್ನು ಸಂಗ್ರಹಿಸಿದರೂ ಜಾಣ್ಮೆಯಿಂದ ಮರೆಸಿದೆ . ಇಲ್ಲದಿದ್ದರೆ ಕೆಲವು ವರುಷಗಳ ಹಿಂದಿನ ಘಟನೆಗೆ ಕೊರಗುವ ನಾವು ಜನ್ಮಾಂತರಗಳ ವಿಚಾರವನ್ನು ಭರಿಸಿದರೆ ಹುಚ್ಚರಾಗಿರುತ್ತಿದ್ದೆವು . ಅಷ್ಟರ ಮಟ್ಟಿಗೆ ಪ್ರಕೃತಿ ಮರೆವನ್ನು ವರವಾಗಿಯೇ ನೀಡಿದೆ .

ಮರೆಗುಳಿತನ ಒಂದು ತೆರನಾದ ಸಮಸ್ಯೆ ,ಒಪ್ಪಬಹುದು ಆದರೆ ಮರೆವು ಅನ್ನುವ ಪ್ರಕ್ರಿಯೆ ಇಲ್ಲದಿದ್ದರೆ ಜೀವನದಲ್ಲಿ ನಾವಿನ್ಯತೆಯೇ ಇಲ್ಲವಾಗುತ್ತದೆ . ಎಂದೋ ಮಾಡಿದ ಸಣ್ಣ ತಪ್ಪನ್ನು ಮರೆಯದ ನಮಗೆ ಕ್ಷಮೆ ಸಾಧ್ಯವಾಗುವುದಿಲ್ಲ . ಅವಮಾನಗಳು ಮರೆಯದೆ ಹೊಸ ಬಾಂಧವ್ಯ ಮೂಡುವುದಿಲ್ಲ.



ಮನಸ್ಸು ಕ್ಷೋಭೆಗೊಂಡರೆ ಚಿತ್ತದ ಪರದೆ ಗೋಜಲಾಗುತ್ತದೆ . ಇದರಿಂದ ವಿಚಾರಗಳ ಜ್ಞಾಪಿಸಿಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತದೆ . ಮನಸ್ಸು ಶಾಂತವಾದಾಗ ನಮ್ಮ ಸಾಮರ್ಥ್ಯ ಅಧಿಕವಾಗುತ್ತದೆ , ವಿಚಾರಗಳ ಮಥನ ಮರುಪೂರಣ ವ್ಯವಸ್ಥೆ ಚೆನ್ನಾಗಿ ಕೆಲಸ ಮಾಡುತ್ತದೆ . ಮರೆವು ದೂರವಾಗುತ್ತದೆ . ಹಲವು ಸಾಧಕರು ಧ್ಯಾನ , ಶಾಂತ ವಾತಾವರಣವನ್ನು ಸೃಷ್ಟಿಸಿಕೊಳ್ಳುವ ಕಲೆ ಸಿದ್ಧಿಸಿಕೊಂಡಿರುತ್ತಾರೆ . ಅವರಲ್ಲಿ ಸಹಜವಾಗಿಯೇ ಮರೆವು ಕಮ್ಮಿ. ಒಮ್ಮೆ ನೋಡಿದ್ದರೂ ನಮ್ಮ ಗುರುತು ಹೇಳಿ ಹೆಸರು ಹೇಳುವಷ್ಟು ನೆನಪು ಅವರದಾಗಿರುತ್ತದೆ .

ಮರೆವು ವರವೇ . ಮರೆಗುಳಿತನ ಶಾಪವಾಗಿರಬಹುದು ಆದರೆ ಅದಕ್ಕೆ ಪರಿಹಾರವಿದೆ . ಪ್ರಕೃತಿ ಸಹಜವಾದ ಮರೆವನ್ನು ದೂರದೇ ಅದನ್ನು ವರವಾಗಿ ಬಳಸಿಕೊಳ್ಳುವುದರಲ್ಲಿ ಮಾನವರಾದ ನಮ್ಮ ಜಾಣ್ಮೆ ಅಡಗಿದೆ.